Elementary Science

TESS India

# Using the community: environmental issues

# ಸಮುದಾಯವನ್ನು ಬಳಸುವುದು: ಪರಿಸರ ಸಮಸ್ಯೆಗಳು





Teacher Education through School-based Support in India
www.TESS-India.edu.in

The Open University

UKaid from the British people

CC BY SA
http://creativecommons.org/licenses/

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹಾದಾಸೆಯ ದೃಷ್ಠಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿ ಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ಸಹಾಯ ಹಸ್ತ ನೀಡುವುದೇ ಟೆಸ್ - ಇಂಡಿಯಾOERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು ಗಳೆಂದು ಪರಿಗಣಿಸಿ ಅವರು 'ವಿದ್ಯಾರ್ಥಿ' ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್ ಇಂಡಿಯಾ OERನಲ್ಲಿನ ಮಾದರಿಯಂತೆ ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್ ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ ವಿದ್ಯಾರ್ಥಿಗಳ ನಡುವಿನ - ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು ಒಳಗೊಂಡಿದೆ. ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

**ವೀಡಿಯೋ ಸಂಪನ್ಮೂಲಗಳು** 

ಟೆಸ್ ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0 ES15TESSKNV1*
*Karnataka*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

*TESS-India is led by The Open University UK and funded by UK aid from the UK government*

## ಈ ಘಟಕದಲ್ಲಿ ಏನಿದೆ

ಮಕ್ಕಳು ಸ್ವಯಂ ಪ್ರೇರಿತರಾಗಿ ತಮ್ಮ ಸುತ್ತಲಿನ ಪ್ರಪಂಚವನ್ನು ಪರಿಶೋಧಿಸುವ ಒಂದು ಸಹಜ ಧೋರಣೆ ಹೊಂದಿರುತ್ತಾರೆ.  ತರಗತಿಯ ಹೊರಗಡೆ ಆಗುವ ಕಲಿಕೆಯು, ಸೃಜನಶೀಲ, ಸಂತೋಷವನ್ನುಂಟು ಮಾಡುವ ಮತ್ತು ತೊಡಗಿಸುವ ಒಂದು ಕಲಿಕಾ ರೂಪವಾಗಿದೆ. ಇದು ಉತ್ತಮ ಅಭ್ಯಾಸದ ಅವಿಭಾಜ್ಯ ಅಂಗವಾಗಿದ್ದು, ಪಠ್ಯಕ್ರಮದ ಎಲ್ಲಾ ಕ್ಷೇತ್ರಗಳಲ್ಲೂ ಕಾಣಬಹುದಾಗಿದೆ. ಶಾಲೆಯ ಹೊರಗಿನ ಮತ್ತು ಅದಕ್ಕೂ ಮೀರಿದ ವಾತಾವರಣವು ನೈಜ ಪ್ರಪಂಚದ ಅರಿವನ್ನು ಮೂಡಿಸಿ, ಪ್ರಾಯೋಗಿಕ ಅನುಭವಗಳಲ್ಲಿ ತೊಡಗಿಸಿ ವೈಜ್ಞಾನಿಕ ಚಿಂತನೆಯನ್ನು ಉತ್ತೇಜಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಇದು ಪ್ರಾಥಮಿಕ ಶಾಲಾ ವಿಜ್ಞಾನ ವಿಷಯದಲ್ಲಿ ಅಧಿಕೃತವಾದ ಪ್ರಾಯೋಗಿಕ ಕೆಲಸಗಳನ್ನು ನಿರ್ವಹಿಸಲು ಅವಕಾಶಗಳನ್ನು ಒದಗಿಸುತ್ತದೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005) ರ ಪ್ರಕಾರ ಒಂದು ಮಗುವು ಸಹಜ ಕಲಿಕಾರ್ಥಿ ಮತ್ತು ಅವರ ಚಟುವಟಿಕೆಗಳ ಫಲಿತವೇ ಜ್ಞಾನ ಮತ್ತು ತಿಳುವಳಿಕೆ. ಮಕ್ಕಳು ಕುತೂಹಲಕಾರಿಯಾಗಿರುತ್ತಾರೆ, ತಮ್ಮ ಸುತ್ತಲಿನ ಪ್ರಪಂಚದ ಅರಿವನ್ನು ಪಡೆಯುವಲ್ಲಿ ನಿರಂತರವಾಗಿ ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು ತಮ್ಮ ಪರಿಸರವನ್ನು ಪರಿಶೋಧಿಸಲು ಒಲವನ್ನು ತೋರುತ್ತಾರೆ ಎಂದೂ ಸಹ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ತಿಳಿಸುತ್ತದೆ.

ತರಗತಿಯ ಹೊರಗಿನ ಕಲಿಕೆಯು ಒಂದು ಸ್ಥಳೀಯ ಉದ್ಯಾನವನಕ್ಕೆ ಭೇಟಿ ನೀಡುವುದು ಅಥವಾ ಇನ್ನೂ ಸ್ವಲ್ಪ ದೂರದ ಪ್ರಯಾಣ ಕೈಗೊಳ್ಳುವುದು ಎಂಬುದನ್ನು ಒಳಗೊಂಡಿರಬಹುದು ಆದರೆ ಕೆಲವೊಮ್ಮೆ ಶಾಲಾ ಆಟದ ಮೈದಾನ ಮತ್ತು ಸುತ್ತಲಿನ ವಾತಾವರಣದಲ್ಲಾಗುವ ಅನ್ವೇಷಣೆಯೂ ಸಹ ಅಷ್ಟೇ ಪರಿಣಾಮಕಾರಿಯಾಗಿರುವುದು.

ತರಗತಿಯ ಹೊರಗೆ ಪಾಠ ಬೋಧನೆ ಮಾಡುವುದರಿಂದ ವಿದ್ಯಾರ್ಥಿಗಳ ಪ್ರಮುಖ ವೈಜ್ಞಾನಿಕ ಪರಿಕಲ್ಪನೆಗಳ ಗ್ರಹಿಕೆ ಮತ್ತು ಪ್ರೇರೇಪಣೆಯನ್ನು ಹೇಗೆ ಉತ್ತಮ ಪಡಿಸಿಕೊಳ್ಳಬಹುದು ಎಂಬುದನ್ನು ಈ ಘಟಕವು ಶೋಧಿಸುತ್ತದೆ.

## ಈ ಘಟಕದ ಮೂಲಕ   ಏನನ್ನು ಕಲಿಯುವಿ ರಿ

- ಪ್ರಾಥಮಿಕ ಶಾಲಾ ವಿಜ್ಞಾನ ವಿಷಯವನ್ನು ಬೋಧಿಸಲು ಸಮುದಾಯ ಮತ್ತು ಹೊರಗಿನ ಪರಿಸರವನ್ನು ಹೇಗೆ ಬಳಸಿಕೊಳ್ಳುವುದು
- ವಿದ್ಯಾರ್ಥಿಗಳ ವೈಜ್ಞಾನಿಕ ಗ್ರಹಿಕೆಯನ್ನು ಹೆಚ್ಚಿಸಿ  ವಿಜ್ಞಾನವನ್ನು ನೈಜ ಪ್ರಪಂಚದೊಂದಿಗೆ ಜೋಡಿಸುವ ಮಹತ್ವ
- ತರಗತಿಯ ಹೊರಗೆ ಬೋಧಿಸಲು ಹೇಗೆ ಯೋಜಿಸುವುದು ಮತ್ತು ವಿಜ್ಞಾನ ಹಾಗೂ ಅವರ ಪರಿಸರದೊಂದಿಗೆ ವಿದ್ಯಾರ್ಥಿಯ ತೊಡಗುವಿಕೆಯನ್ನು ಸಮುದಾಯದ ಸಂಪನ್ಮೂಲಗಳನ್ನು ಬಳಸಿ ಹೇಗೆ ಉತ್ತಮ ಪಡಿಸುವುದು.

## ಈ ವಿಧಾನವು ಏಕೆ ಮುಖ್ಯ

ಶಿಕ್ಷಕರಾಗಿ ನಿಮ್ಮ ಪಾತ್ರವು ವಿದ್ಯಾರ್ಥಿಗಳನ್ನು ವಿಜ್ಞಾನದ ಬಗ್ಗೆ ಕಲಿಯುವಂತೆ ಮಾಡಿ ಸಮರ್ಥರನ್ನಾಗಿಸುವುದು, ಮತ್ತು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಲು ಸ್ಥಳೀಯ ಪರಿಸರವು ಅನೇಕ ಸಂದರ್ಭಗಳನ್ನು ಹಾಗೂ ಅವಕಾಶಗಳನ್ನು ಒದಗಿಸುತ್ತದೆ. ವಿಜ್ಞಾನವು ಒಂದು ಪ್ರಾಯೋಗಿಕ ವಿಷಯವಾಗಿದ್ದು, ಅದು ನಮ್ಮೆಲ್ಲರ ಜೀವನಕ್ಕೆ ಪ್ರಸ್ತುತವಾಗಿದೆ, ಹಾಗಾಗಿ ಹೊರಗಿನ ಪರಿಸರವನ್ನು ಬಳಸುವುದರಿಂದ ನಿಮ್ಮ ವಿದ್ಯಾರ್ಥಿಗಳ ಪ್ರತಿನಿತ್ಯದ ಜೀವನಕ್ಕೆ ವಿಜ್ಞಾನವನ್ನು ಜೋಡಣೆ ಮಾಡುವುದರ ಮೂಲಕ ನೆರವು ನೀಡಬಹುದು. ಸ್ಥಳೀಯ ಸಮುದಾಯ ಮತ್ತು ಅದರ ಸಂಪನ್ಮೂಲಗಳನ್ನು ಬಳಸುವುದರಿಂದ, ನೀವು ಬೋಧಿಸುವ ವಿಜ್ಞಾನದ ಪರಿಕಲ್ಪನೆಗಳು ಮತ್ತು ಆಲೋಚನೆಗಳನ್ನು ಹೇಗೆ ಒಟ್ಟುಗೂಡಿಸಬೇಕು ಮತ್ತು ಪ್ರತಿನಿತ್ಯದ ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳಬೇಕು ಅಥವಾ ತಮ್ಮ ಜೀವನವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಹೇಗೆ ಜೀವಿಸಬಹುದು ಎಂಬುದರ ಬಗ್ಗೆ ನಿಮ್ಮ ವಿದ್ಯಾರ್ಥಿಗಳಿಗೆ ಸಹಾಯವಾಗಬಹುದು.

ಈ ಘಟಕವು ನಿಮ್ಮ ಬೋಧನೆಯನ್ನು ವೃದ್ಧಿಸಲು ಹೊರಗಿನ ವಾತಾವರಣವನ್ನು ತರಗತಿಯ ಒಂದು ವಿಸ್ತರಣೆಯಾಗಿ ಹೇಗೆ ಬಳಸಬಹುದು ಎಂಬುದರ ಮೇಲೆ ಕೇಂದ್ರೀಕರಿಸುತ್ತದೆ. ಸ್ಥಳೀಯ ಪರಿಸರವನ್ನು ನಿಮ್ಮ ಬೋಧನೆಗೆ ಒಂದು ಸಂಪನ್ಮೂಲವಾಗಿ ಹೇಗೆ ಬಳಸಬಹುದು ಎಂಬುದನ್ನು ಸಹ ಪರಿಶೋಧಿಸುತ್ತದೆ.

## 1 ಸ್ಥಳೀಯ  ಕ್ಷೇತ್ರವನ್ನು ಒಂದು ಸಂಪನ್ಮೂಲವಾಗಿ  ಬಳಸುವುದು

ಸ್ಥಳೀಯ ಸಂಪನ್ಮೂಲಗಳನ್ನು ಉಪಯೋಗಿಸಿ ತರಗತಿಯ ಹೊರಗಿನ ಪರಿಶೋಧನೆಗೆ, ಪ್ರಾಥಮಿಕ ಶಾಲೆಯ ಅನೇಕ ವಿಷಯ ವಸ್ತುಗಳನ್ನು ಬಹಳ ಉತ್ತಮವಾಗಿ ಬಳಸಿಕೊಳ್ಳಬಹುದಾಗಿದೆ.

## ಚಟುವಟಿಕೆ 1: ಸ್ಥಳೀಯ ಕ್ಷೇತ್ರವನ್ನು ಪರಿಶೋಧಿಸುವುದು

ನಿಮಗೆ ಇದೊಂದು ಯೋಜನೆಯ ಚಟುವಟಿಕೆ. ನಿಮ್ಮ ವಿದ್ಯಾರ್ಥಿಗಳು ಪರಿಸರದ ಸಮಸ್ಯೆಗಳ ಬಗೆಗಿನ ಅರಿವನ್ನು ಹೆಚ್ಚಿಸಿಕೊಳ್ಳುವಲ್ಲಿ ನೀವು ನಿಮ್ಮ ಸ್ಥಳೀಯ ಪರಿಸರವನ್ನು ಬಳಸಿಕೊಳ್ಳುವಿರಿ.

ಯೋಜಿಸಲು, ನೀವು ಮೊದಲಿಗೆ ಹೊರಗೆ ಹೋಗಬೇಕು ಮತ್ತು ನಿಮ್ಮ ಶಾಲಾ ಮೈದಾನದಲ್ಲಿ ಹಾಗೂ ಸ್ಥಳೀಯ ಕ್ಷೇತ್ರದಲ್ಲಿ ಓಡಾಡಬೇಕು. ನೀವು ಓಡಾಡುವಾಗ, ಪ್ರಾಥಮಿಕ ಶಾಲೆಯ ವಿಜ್ಞಾನ ಪಠ್ಯಕ್ರಮ, ವಿಶೇಷವಾಗಿ ಪರಿಸರ ಅಧ್ಯಯನವನ್ನು ಬೆಂಬಲಿಸಲು, ತರಗತಿಯ ಹೊರಗೆ ಕಲಿಕಾ ಅವಕಾಶಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿರುವ ಕ್ಷೇತ್ರಗಳನ್ನು ಪಟ್ಟಿ ಮಾಡಿ. ನೀವು ಈ ಕ್ಷೇತ್ರಗಳನ್ನು ಹೇಗೆ ಬಳಸಬಹುದೆಂದು ಯೋಚಿಸಿ. ಉದಾಹರಣೆಗೆ, ಸಸ್ಯಗಳ ರಚನೆಯನ್ನು ಮತ್ತು ಅವುಗಳು ವಾಸಿಸುವ ವಿವಿಧ ಆವಾಸ ಸ್ಥಾನಗಳನ್ನು ಅನ್ವೇಷಿಸಲು ನೀವು ಯಾವ ಕ್ಷೇತ್ರಗಳನ್ನು ಬಳಸಿಕೊಳ್ಳಬಹುದು.

## ಸಂದರ್ಭ ಅಧ್ಯಯನ 1: ಸಸ್ಯಗಳ ಶೋಧನೆ (Doing a scavenger hunt)

*ಶ್ರೀಮತಿ ಪ್ರೇಮಾರವರು ಸಸ್ಯಗಳ ಬಗ್ಗೆ ಬೋಧಿಸಲು ಪ್ರಾರಂಭಿಸುವ ಸಲುವಾಗಿ ತಮ್ಮ ಶಾಲೆಯ ಹೊರಗಿನ ಆವರಣವನ್ನು ಬಳಸಿಕೊಂಡು ತಮ್ಮ ವಿಜ್ಞಾನ ಪಾಠಗಳು ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಚೋದಿಸುವಂತೆ ಮಾಡಲು ಕೈಗೊಂಡ ಪ್ರಯತ್ನಗಳ ಬಗ್ಗೆ ವಿವರಿಸುವರು.*

ಹೊಲಗಳು ಮತ್ತು ಮರಗಳಿಂದ ಸುತ್ತುವರಿದ ಒಂದು ಗ್ರಾಮೀಣ ಪ್ರದೇಶದಲ್ಲಿ ನಾನು ಬೋಧನೆ ಮಾಡುತ್ತಿದ್ದುದರಿಂದ, ನನ್ನ ವಿದ್ಯಾರ್ಥಿಗಳನ್ನು ಶಾಲಾ ಆವರಣದ ಸುತ್ತ ಬೆಳೆದಿರುವ ಅನೇಕ ಸಸ್ಯಗಳನ್ನು ಶೋಧಿಸಲು ಪ್ರಯತ್ನಿಸುವಂತೆ ಮಾಡಲು ನಿರ್ಧರಿಸಿದೆ. ನಾನು ನಮ್ಮ ಮುಖ್ಯೋಪಾಧ್ಯಾಯರಿಗೆ, ನಾನು ಏನು ಮಾಡುತ್ತಿರುವೆನೆಂದು ತಿಳಿಸಿದೆ. ಅವರಿಗೆ ಬಹಳ ಸಂತೋಷವಾಯಿತು ಏಕೆಂದರೆ ಅವರು ಶಿಕ್ಷಕರಿಗೆ ತಮ್ಮ ಪಾಠ ಬೋಧನೆಯಲ್ಲಿ ವಿವಿಧ ತಂತ್ರಗಳನ್ನು ಬಳಸುವಂತೆ ಪ್ರೋತ್ಸಾಹಿಸುತ್ತಿರುತ್ತಾರೆ.

ಆ ದಿನ ಮೊದಲು ನಾನು ನನ್ನ ತರಗತಿಯ ವಿದ್ಯಾರ್ಥಿಗಳಿಗೆ ನಾವು ಏನು ಮಾಡಬೇಕೆಂದಿದ್ದೇವೆ ಮತ್ತು ನಿರ್ವಹಿಸಬೇಕಾದ ಕಾರ್ಯದ ಬಗ್ಗೆ ವಿವರಿಸಿದೆ. ನಂತರ, ವಿಶೇಷವಾಗಿ ಆ ತರಗತಿಯಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿದ್ದುದರಿಂದ ನಾನು ತರಗತಿಯ ಹೊರಗೆ ಅವರು ಹೇಗೆ ವರ್ತಿಸಬೇಕೆಂದು ಕೆಲವು ಸರಳ ನಿಯಮಗಳನ್ನು ತಿಳಿಸಿದೆ. ನಾನು ಅವರಿಗೆ ಸಸ್ಯಗಳ ಮಾದರಿಗಳನ್ನು ಹೇಗೆ ಸಂಗ್ರಹಿಸಬೇಕೆಂದು ಸಹ ವಿವರಿಸಿದೆ ಏಕೆಂದರೆ, ಅವರು ಸಸ್ಯಗಳಿಗೆ ಹಾನಿ ಮಾಡದೆ ಅಥವಾ ಯಾವುದೇ ಒಂದು ಸಸ್ಯದಿಂದ ಹಲವಾರು ಮಾದರಿ ಭಾಗಗಳನ್ನು ಅಥವಾ ಒಂದು ನಿಗದಿತ ಸ್ಥಳದಿಂದ ಹಲವಾರು ಸಸ್ಯಗಳನ್ನು ತೆಗೆದುಕೊಳ್ಳಬಾರದು ಎಂದು ವಿವರಿಸಿದೆ.

ಅವರ ಕಾರ್ಯವು ಎಷ್ಟು ಸಾಧ್ಯವೋ ಅಷ್ಟು ವಿಭಿನ್ನ ಬಗೆಯ ಸಸ್ಯಗಳನ್ನು ಹುಡುಕುವುದಾಗಿತ್ತು. ಆದರೆ ಪ್ರತಿಯೊಂದು ವಿದ್ಯಾರ್ಥಿ ಜೋಡಿಯು ಗರಿಷ್ಠ 6 ಸಸ್ಯಗಳನ್ನು ಮಾತ್ರ ಸಂಗ್ರಹಿಸಬೇಕು. ಅವರು ಪರಸ್ಪರ ಮಾತನಾಡುವ ಅವಶ್ಯಕತೆಯಿತ್ತು. ಏಕೆಂದರೆ, ಅವರೆಲ್ಲರೂ ಒಂದೇ ರೀತಿಯ 6 ಸಸ್ಯಗಳನ್ನು ತೆಗೆದುಕೊಳ್ಳಬಾರದಿತ್ತು. ಈ ಕೆಲಸವನ್ನು ಮಾಡುವಾಗ ಅವರು ಮೆಲುದನಿಯಲ್ಲಿ ಮಾತನಾಡಬೇಕಿತ್ತು. ಏಕೆಂದರೆ ಅವರು ತರಗತಿಯಲ್ಲಿರುವ ಇತರ ವಿದ್ಯಾರ್ಥಿಗಳಿಗೆ ತೊಂದರೆಯುಂಟು ಮಾಡಬಾರದಿತ್ತು. ಸಸ್ಯಗಳನ್ನು ಸಂಗ್ರಹಿಸಲು ಅವರು ಶಾಲೆಯ ಸುತ್ತಲೂ ನಡೆದಾಡುತ್ತಿದ್ದಾಗ ನಾನು ಸಹ ಅವರೊಂದಿಗೆ ಹೋಗಿ, ಅವರು ಮಾಡುತ್ತಿರುವ ಕೆಲಸವನ್ನು ಗಮನಿಸಿದೆ ಮತ್ತು ಆಲಿಸಿದೆ. ಅವರು ಮಾತನಾಡುತ್ತಿರುವುದನ್ನು ಕೇಳುವುದು ನನಗೆ ಬಹಳ ಆಸಕ್ತಿದಾಯಕವಾಗಿತ್ತು.  ಏಕೆಂದರೆ, ಕೆಲವೊಂದು ಸಸ್ಯಗಳನ್ನು ಅವರು ಗುರುತಿಸಲು ಸಾಧ್ಯವಾಗಿತ್ತು. ಆದರೆ ನೀರು ತುಂಬಿದ ಹಳ್ಳದಲ್ಲಿ ಬೆಳೆದಿದ್ದ ಕೆಲವು ಸಸ್ಯಗಳ ಬಗ್ಗೆ ಅವರು ತಿಳಿದಿರಲಿಲ್ಲ.

ಕೆಲವು ನಿಮಿಷಗಳ ನಂತರ ನಾನು ಅವರನ್ನೆಲ್ಲ ಕರೆದು ಒಂದು ಮರದ ಕೆಳಗೆ ಕುಳಿತು ಸಂಗ್ರಹಿಸಿದ್ದ ಸಸ್ಯಗಳನ್ನೆಲ್ಲಾ ಹರಡಿದೆವು. ವಿದ್ಯಾರ್ಥಿಗಳು ಜೋಡಿಯಾಗಿ ಕೆಲಸವನ್ನು ನಿರ್ವಹಿಸಿದ್ದರು. ಈಗ ನಾನು ಈ ಜೋಡಿಗಳನ್ನು ನಾಲ್ಕರ ಗುಂಪುಗಳನ್ನಾಗಿ ಮಾಡಿಕೊಳ್ಳಲು ತಿಳಿಸಿದೆ. ಏಕೆಂದರೆ ಎಷ್ಟು ವಿಭಿನ್ನ ಬಗೆಯ ಸಸ್ಯಗಳನ್ನು ವಿದ್ಯಾರ್ಥಿಗಳು ಸಂಗ್ರಹಿಸಿದ್ದರು ಮತ್ತು ಅವುಗಳಲ್ಲಿ ಎಷ್ಟು ಸಸ್ಯಗಳನ್ನು ಅವರು ಹೆಸರಿಸಬಹುದಿತ್ತು ಎಂದು ಕಂಡುಕೊಳ್ಳಬೇಕಿತ್ತು.

ನಂತರ ನಾನು ಅವರಿಗೆ ಪ್ರತಿಯೊಂದು ಸಸ್ಯವೂ ವಿಭಿನ್ನವಾಗಿದೆ ಎಂದು ಹೇಗೆ ಅರಿತರು ಎಂಬುದನ್ನು ತಿಳಿಸಲು ಹೇಳಿದೆ. ಸಸ್ಯದ ಎಲೆಯ ಆಕಾರ, ಹೂವಿನ ತೊಟ್ಟು ಮುಂತಾದವುಗಳ ಬಗ್ಗೆ ಅವರು ಪ್ರಸ್ತಾಪಿಸಿದರು ಮತ್ತು ಈ ಎಲ್ಲಾ ಗುಣಲಕ್ಷಣಗಳನ್ನು ವಿವರಿಸಲು ಅವರು ವಿಭಿನ್ನ ಪದಗಳನ್ನು ಬಳಸಿದರು. ನಾಲ್ಕು ವಿದ್ಯಾರ್ಥಿಗಳಿದ್ದ ಪ್ರತಿಯೊಂದು ಗುಂಪಿಗೂ ಈ ಸಸ್ಯದ ಮಾದರಿಗಳನ್ನು ತರಗತಿಯ ಒಳಗೆ ತೆಗೆದುಕೊಂಡು

ಹೋಗಲು ತಿಳಿಸಿದೆ. ನಾನು ವೃತ್ತಪತ್ರಿಕೆಯ ಒಂದು ಹಾಳೆಯನ್ನು ನೀಡಿ ಅದರ ಮೇಲೆ ಸಸ್ಯಗಳನ್ನಿಡಲು ತಿಳಿಸಿದೆ. ಮುಂದಿನ ಪಾಠಕ್ಕೆ ಅನುಕೂಲವಾಗುವಂತೆ, ವೃತ್ತಪತ್ರಿಕೆಯ ಹಾಳೆಗಳ ನಡುವೆ ಸಸ್ಯಗಳನ್ನು ಒತ್ತಿ ಇಡಲು ತಿಳಿಸಿದೆ.

ಮುಂದಿನ ಪಾಠದಲ್ಲಿ ಸಸ್ಯದ ವಿವಿಧ ಭಾಗಗಳ ಗುಣಲಕ್ಷಣಗಳನ್ನು ಪರಿಶೀಲಿಸೋಣ ಎಂದು ತಿಳಿಸಿದೆ.

ನಾವು ಕೆಲವು ಸಸ್ಯಗಳು ಒಂದೇ ರೀತಿಯ ಗುಣಲಕ್ಷಣಗಳನ್ನು ಹೊಂದಿರುವ ಬಗ್ಗೆ ಪರಿಶೋಧಿಸೋಣ. ಆದರೆ, ಅವುಗಳ ಆಕಾರ ಮತ್ತು ರಚನೆಯಲ್ಲಿ ವ್ಯತ್ಯಾಸವಿದೆ. ಅವರು ನಿಶ್ಶಬ್ದವಾಗಿ ಹಾಗೂ ಜಾಗೂರಕರಾಗಿ ಸಸ್ಯಗಳನ್ನು ವರ್ಗೀಕರಣ ಮಾಡತೊಡಗಿದರು. ನಂತರ ನಾವು ಹೆಚ್ಚಿನ ಸಂಖ್ಯೆಯಲ್ಲಿ ಹಳೆಯ ಪಠ್ಯಪುಸ್ತಕಗಳನ್ನು ಎಲೆಗಳಿರುವ ಹಾಳೆಗಳ ಮೇಲೆ ಒಂದರ ಮೇಲೆ ಒಂದರಂತೆ, ಎಲೆಗಳು ಸಮತಟ್ಟಾಗುವಂತೆ ಇಡಲಾಯಿತು.

ಅವರು ಹೊರಗೆ ಇದ್ದಾಗ, ಎಷ್ಟು ಸೂಕ್ಷ್ಮಗ್ರಾಹಿಗಳಾಗಿದ್ದರೂ ಎಂಬುದನ್ನು ತಿಳಿದು ನನಗೆ ಬಹಳ ಸಂತೋಷವಾಯಿತು. ಆದರೆ, ಅವರು ಸಸ್ಯಗಳನ್ನು ನೋಡುವಾಗ ಎಷ್ಟು ಆಸಕ್ತಿ ಮತ್ತು ಕುತೂಹಲದಿಂದ ತೊಡಗಿಕೊಂಡಿದ್ದನ್ನು ಕಂಡು ನಾನು ತುಂಬಾ ಉತ್ತೇಜಿತಳಾದೆ. ಹಿಂದಿನ ವರ್ಷದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕದಲ್ಲಿರುವ ಸಸ್ಯಗಳ ಬಗ್ಗೆ ಇರುವ ಪಾಠಗಳು ಹೆಚ್ಚು ಆಸಕ್ತಿದಾಯಕವಾಗಿರಲಿಲ್ಲ. ಹಾಗಾಗಿ ಈ ಚಟುವಟಿಕೆಯು ಹೆಚ್ಚು ಭರವಸೆಯಿಂದ ಕೂಡಿತ್ತು.



**ಚಿಂತನೆಗೊಂದು ಕ್ಷಣ**

- ನಿಮ್ಮ ವಿದ್ಯಾರ್ಥಿಗಳಿಗೆ ಈ ಚಟುವಟಿಕೆಯು ಎಷ್ಟು ಅನುಕೂಲವಾಗುವುದು ಎಂದು ನೀವು ಭಾವಿಸುವಿರಿ?
- ನಿಮ್ಮ ವಿದ್ಯಾರ್ಥಿಗಳು ತಮ್ಮ ಸ್ಥಳೀಯ ಪರಿಸರದಿಂದ ಬೇರಾವ ವಿಷಯಗಳನ್ನು ಕಲಿಯಬಹುದು?

## ಚಟುವಟಿಕೆ 2: ಬೇರೆ ಬೇರೆ ವಸ್ತುಗಳನ್ನು ಸಂಗ್ರಹಿಸುವುದು (Doing a scavenger hunt)

ನಿಮ್ಮ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕದಲ್ಲಿರುವ ಒಂದು ಹೊಸ ಅಧ್ಯಾಯಕ್ಕೆ ಪ್ರಾರಂಭಿಕ ಚಟುವಟಿಕೆಯಾಗಿ ಬೇರೆ ಬೇರೆ ವಸ್ತುಗಳನ್ನು ಸಂಗ್ರಹಿಸುವುದು (doing a scavenger hunt) ಇದರ ಮೂಲಕ ಹೇಗೆ ಮಾಡಬಹುದು ಎಂದು ನೀವು ಆಲೋಚಿಸುವಿರಿ. ನಿಮ್ಮ ತರಗತಿಯ ವಿದ್ಯಾರ್ಥಿಗಳಿಗೆ ಇದನ್ನು ನೀವು ಹೇಗೆ ವ್ಯವಸ್ಥೆಗೊಳಿಸುವಿರಿ?

ಸಸ್ಯಗಳನ್ನು ಹೊರತುಪಡಿಸಿ ನೀವು ಬೇರೆ ಇನ್ನಾವುದಾದರೂ ವಸ್ತುಗಳನ್ನು ಬಳಸಿ ಇದನ್ನು ಮಾಡಬಹುದು ಹಾಗಾಗಿ ನಿಮ್ಮ ವಿದ್ಯಾರ್ಥಿಗಳು ಬೇರೆ ಬೇರೆ ವಸ್ತುಗಳನ್ನು ಸಂಗ್ರಹಿಸಬಹುದು ಮತ್ತು ಗುಂಪುಗಳಲ್ಲಿ ಅವುಗಳನ್ನು ವರ್ಗೀಕರಿಸಲು ಸಮಯವನ್ನು ತೆಗೆದುಕೊಳ್ಳುವರು.

ನಿಮ್ಮ ತರಗತಿಯ ವಿದ್ಯಾರ್ಥಿಗಳನ್ನು ಹೊರಗೆ ಕರೆದುಕೊಂಡು ಹೋಗಿ ಹೇಗೆ ವಸ್ತುಗಳನ್ನು ಸಂಗ್ರಹಿಸುವುದು ಎಂಬುದರ ಕುರಿತು ಒಂದು ಯೋಜನೆಯನ್ನು ಸಂಘಟಿಸಿ. ನೀವು ನಿಮ್ಮ ವಿದ್ಯಾರ್ಥಿಗಳನ್ನು ಶಾಲೆಯ ಹೊರಗಿನ ಆವರಣಕ್ಕೆ ಕರೆದುಕೊಂಡು ಹೋಗಲು ಮುಖ್ಯೋಪಾಧ್ಯಾಯರ ಅನುಮತಿಯನ್ನು ಪಡೆಯಲು ಮರೆಯದಿರಿ.

ಪಾಠವನ್ನು ಬೋಧನೆ ಮಾಡಿ ನಿಮ್ಮ ವಿದ್ಯಾರ್ಥಿಗಳು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂದು ಗಮನಿಸಿ. ಅವಶ್ಯಕತೆಯಿದ್ದಲ್ಲಿ ಅವರನ್ನು ಪ್ರೋತ್ಸಾಹಿಸಿ.

ಇಂತಹ ಪಾಠದ ಸಿದ್ಧತೆಯು ಬಹಳ ಸರಳ ಮತ್ತು ಇದಕ್ಕೆ ತುಂಬಾ ಕಡಿಮೆ ಅಥವಾ ಯಾವುದೇ ಸಂಪನ್ಮೂಲಗಳನ್ನು ಸಂಗ್ರಹಿಸುವ ಅವಶ್ಯಕತೆಯಿರುವುದಿಲ್ಲ. ಏಕೆಂದರೆ, ನಿಮ್ಮ ವಿದ್ಯಾರ್ಥಿಗಳೇ ಇದನ್ನು ಚಟುವಟಿಕೆಯ ಒಂದು ಭಾಗವಾಗಿ ಮಾಡುವರು. ಇದರಿಂದ ನೀವು ಒಂದು ರೀತಿಯ ಸಂಪನ್ಮೂಲಯುತ ಶಿಕ್ಷಕರಾಗಿ, ಯಾವುದು ಲಭ್ಯವಿದೆಯೋ ಆ ವಸ್ತುವನ್ನು ಬಳಸುವುದು.



**ವಿಡಿಯೋ: ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು**

**ಚಿಂತನೆಗೊಂದು ಕ್ಷಣ**

- ನಿಮ್ಮ ತರಗತಿಯ ವಿದ್ಯಾರ್ಥಿಗಳು ಯಾವ ವಸ್ತುಗಳನ್ನು ಕಂಡುಕೊಂಡರು?
- ಈ ವಸ್ತುಗಳನ್ನು ಬೇರೆ ಇನ್ನಾವ ಬೋಧನಾ ಚಟುವಟಿಕೆಯಲ್ಲಿ ಬಳಸಬಹುದಾಗಿದೆ?
- ನಿಮ್ಮ ವಿದ್ಯಾರ್ಥಿಗಳು ಇಂತಹ ಚಟುವಟಿಕೆಗೆ ಹೇಗೆ ಪ್ರತಿಕ್ರಿಯಿಸಿದರು?
- ಇಂತಹ ಚಟುವಟಿಕೆಗಳನ್ನು ಹೇಗೆ ವಿಸ್ತರಿಸಬಹುದು?

## 2 ಸಂಪನ್ಮೂ ಶಿಕ್ಷಕರೌರುವ ದು

ನಿಮ್ಮಲ್ಲಿ ಹಲವಾರು ಶಿಕ್ಷಕರು ಶಾಲೆಯಲ್ಲಿ ಅತೀ ಕಡಿಮೆ ಉಪಕರಣಗಳು ಅಥವಾ ಸಂಪನ್ಮೂಲಗಳಿರುವಂತಹ ಸವಾಲೊಡ್ಡುವ ಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಹಾಗಾಗಿ ತರಗತಿಯ ಹೊರಗೆ ನಿಮ್ಮ ಚಟುವಟಿಕೆಗಳನ್ನು ವಿಸ್ತರಿಸುವುದರಿಂದ ನಿಮ್ಮ ಬೋಧನೆಯನ್ನು ಇನ್ನೂ ಪರಿಣಾಮಕಾರಿಯಾಗಿಸಬಹುದು. ಮುಂದಿನ ಸಂದರ್ಭ ಅಧ್ಯಯನ ಮತ್ತು ಚಟುವಟಿಕೆ 3 ಮಾಡುವ ಮೊದಲು ಸಂಪನ್ಮೂಲ 1 ರಲ್ಲಿ ನೀಡಿರುವ 'ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು' ಇದನ್ನು ಓದಿ.

ಮುಂದಿನ ಸಂದರ್ಭ ಅಧ್ಯಯನದಲ್ಲಿ 6 ಶಿಕ್ಷಕರು ಮಾತ್ರ ಇರುವ ಒಂದು ಶಾಲೆಯಲ್ಲಿ ಎಲ್ಲರೂ ಒಟ್ಟಿಗೆ ಒಂದು ಗುಂಪಿನಲ್ಲಿ ಕಾರ್ಯ ನಿರ್ವಹಿಸಿ ಸ್ಥಳೀಯ ಪರಿಸರವನ್ನು ಬಳಸುವಲ್ಲಿ ಹೇಗೆ ಸಂಪನ್ಮೂಲಭರಿತರಾಗಿರಬೇಕು ಎಂಬುದನ್ನು ಪರಿಶೋಧಿಸುವರು.

### ಸಂದರ್ಭ ಅಧ್ಯಯನ 2: ಸಂಪನ್ಮೂಲಯುತವಾದ ಒಂದು ಶಾಲೆ

*ಶ್ರೀಮತಿ ಚೈತ್ರಾ ಎಂಬ ಒಬ್ಬ ಶಿಕ್ಷಕಿಯು, ಈ ಪ್ರಕ್ರಿಯೆಯ ಬಗ್ಗೆ ಅವರಿಗೆ ಏನು ಅನಿಸಿತು ಹಾಗೂ ಏನಾಯಿತು ಮತ್ತು ಶಿಕ್ಷಕಿಯಾಗಿ ಅವರಿಗೆ ಇದು ಯಾವ ರೀತಿಯ ವ್ಯತ್ಯಾಸವನ್ನುಂಟು ಮಾಡಿತು ಎಂದು ವಿವರಿಸುವರು. ಅವರು ತಮ್ಮ ವಿದ್ಯಾರ್ಥಿಗಳಿಗೆ ತರಗತಿಯ ಹೊರಗಡೆ ಚಟುವಟಿಕೆಯನ್ನು ಮಾಡಲು ಒಂದು ಯೋಜನೆಯನ್ನು ಸಿದ್ಧಪಡಿಸಲು ನಿರ್ಧರಿಸಿದರು. ಈ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಗುಂಪುಗಳಲ್ಲಿ ತಮ್ಮ ಸುತ್ತಲಿನ ವಾತಾವರಣದಲ್ಲಿರುವ ಆವಾಸ ಸ್ಥಾನಗಳನ್ನು ಗುರುತಿಸಲು ಪ್ರಾರಂಭಿಸುವರು. ಈ ಚಟುವಟಿಕೆಯನ್ನು ಇನ್ನೂ ಉತ್ತಮವಾಗಿ ಸಂಘಟಿಸಲು ಸೂಕ್ತ ಯೋಜನೆಯನ್ನು ಸಿದ್ಧಪಡಿಸುವ ಮೊದಲು ಅವರು ಸಂಪನ್ಮೂಲ 2 ರಲ್ಲಿ ನೀಡಿರುವ 'ಗುಂಪುಕಾರ್ಯವನ್ನು ಬಳಸುವುದು' ಎಂಬುದನ್ನು ಓದಿಕೊಂಡಿದ್ದರು.*

ನಮ್ಮ ಮುಖ್ಯೋಪಾಧ್ಯಾಯರು ತುಂಬಾ ಉತ್ತಮ ಶಿಕ್ಷಕರಾಗಿದ್ದು ತಮ್ಮ ತರಗತಿಯ ವಿದ್ಯಾರ್ಥಿಗಳಿಗೆ ಪಾಠ ಬೋಧನೆ ಮಾಡುವಾಗ ಕೆಲವೊಂದು ಸಲ ಸ್ಥಳೀಯ ಪರಿಸರವನ್ನು ಬಳಸಿಕೊಳ್ಳುವರು. ನಮ್ಮ ವಾರದ ಸಭೆಯ ಒಂದು ಭಾಗವಾಗಿ, ಒಂದು ದಿನ ಅವರು ನಮ್ಮನ್ನು ಸ್ಥಳೀಯ ಪರಿಸರವನ್ನು ಹೆಚ್ಚಾಗಿ ಹೇಗೆ ಬಳಸಬಹುದು ಎಂಬುದನ್ನು ಗುಂಪಿನಲ್ಲಿ ಆಲೋಚಿಸಲು ತಿಳಿಸಿದರು. ನಾವು ಇದರ ಬಗ್ಗೆ ಮಾತನಾಡುತ್ತಾ ನಮ್ಮ ಆಲೋಚನೆಗಳನ್ನು ಪಟ್ಟಿ ಮಾಡಿದೆವು. ಈ ಆಲೋಚನೆಗಳನ್ನು ಒಬ್ಬರಿಗೊಬ್ಬರು ವಿನಿಮಯ ಮಾಡಿಕೊಳ್ಳುವುದರಿಂದ ಸ್ಥಳೀಯ ಕ್ಷೇತ್ರವನ್ನು ಹೇಗೆ ಬಳಸಬಹುದು ಎಂಬುದರ ಬಗ್ಗೆ ಅನೇಕ ಸಲಹೆಗಳು ಹೊರ ಹೊಮ್ಮಲು ಪ್ರಚೋದನೆಯನ್ನು ನೀಡಿದಂತಾಯಿತು. ನಮ್ಮ ಬಳಿ ಇದ್ದ ಆಲೋಚನೆಗಳೆಂದರೆ:

- ವಿದ್ಯಾರ್ಥಿಗಳನ್ನು ಸಸ್ಯ ಸಮೂಹ ಮತ್ತು ಪ್ರಾಣಿ ಸಮೂಹದಂತಹ ವಿಷಯದ ಬಗ್ಗೆ ಪರಿಶೋಧಿಸಲು, ತರಗತಿಯ ಹೊರಗಡೆ ಕರೆದುಕೊಂಡು ಹೋಗುವುದು
- ಆ ಕ್ಷೇತ್ರದ ನಕ್ಷೆಯನ್ನು ರಚಿಸುವುದು
- ಶಾಲಾ ಕಟ್ಟಡ ಮತ್ತು ನಿವೇಶನಗಳನ್ನು ವಿವಿಧ ಉದ್ದೇಶಗಳಿಗಾಗಿ ಅಳತೆ ಮಾಡುವುದು
- ಪರಿಸರದಲ್ಲಿರುವ ಸಂಪನ್ಮೂಲಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಬಳಸುವುದು
- ವಿವಿಧ ವಸ್ತುಗಳ ಅನ್ವೇಷಣೆಗಾಗಿ ಜಾಡನ್ನು ಹಿಡಿದು ಹೋಗುವುದನ್ನು ಬೆಳೆಸುವುದು
- ಆವಾಸ ಸ್ಥಾನಗಳನ್ನು ಗಮನಿಸುವುದು

- ನೆರಳು, ಸೂರ್ಯ ಹಾಗೂ ಇತರೆ, ಇವುಗಳ ಬಗ್ಗೆ ಅಭ್ಯಸಿಸುವುದು
- ವಿದ್ಯಾರ್ಥಿಗಳೊಂದಿಗೆ ಶಾಲೆಯಲ್ಲಿ ಅಥವಾ ಅವರು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಮಾತನಾಡಲು ಸ್ಥಳೀಯ ನುರಿತ ವ್ಯಕ್ತಿಗಳನ್ನು ಬಳಸುವುದು
- ಸ್ಥಳೀಯ ಸಂರಕ್ಷಣೆಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಗಮನಿಸುವುದು
- ಹಾಳೆಗಳ ಕೊರತೆಯನ್ನು ನೀಗಿಸುವ ಸಲುವಾಗಿ ಅದಕ್ಕೆ ಸಂಬಂಧಿಸಿದ ವಸ್ತುಗಳನ್ನು ಸಂಗ್ರಹಿಸಿ, ಸಂಸ್ಕರಿಸಿ ಮರುಬಳಸುವುದು. ಉದಾಹರಣೆಗೆ ರಟ್ಟಿನ ಡಬ್ಬಿಯಲ್ಲಿರುವ ರಟ್ಟನ್ನು ಬಳಸುವುದು ಮತ್ತು ಕವರ್ ಗಳನ್ನು (envelopes) ಸಂಗ್ರಹಿಸಿ ಮರುಬಳಕೆ ಮಾಡುವುದು.

ಇಂತಹ ಸಾಧ್ಯತೆಗಳ ಬಗ್ಗೆ ನಾನು ಮೊದಲು ಆಲೋಚಿಸಿರಲಿಲ್ಲ. ಇಂತಹ ಕೆಲವು ಆಲೋಚನೆಗಳ ಪಟ್ಟಿ ಮತ್ತು ಇದರಿಂದ ಕಂಡುಕೊಳ್ಳಬಹುದಾದ ಕೆಲವು ವಿಷಯಗಳ ಬಗ್ಗೆ ನನಗೆ ಹೆಚ್ಚಿನ ಕುತೂಹಲ ಉಂಟಾಯಿತು. ಇವುಗಳನ್ನು ನಾವು ಯಾವಾಗ ಮತ್ತು ಹೇಗೆ ಬಳಸಬೇಕು ಎಂಬುದು ನಮ್ಮ ಮುಂದಿನ ಕಾರ್ಯವಾಗಿತ್ತು.

ಮೊದಲಿಗೆ, ನಾವು ವಿದ್ಯಾರ್ಥಿಗಳನ್ನು ಸ್ಥಳೀಯ ಕ್ಷೇತ್ರದಿಂದ ಕೆಲವು ವಸ್ತುಗಳನ್ನು ಸಂಗ್ರಹಿಸಲು ಪ್ರೇರೇಪಣೆ ನೀಡುವುದಕ್ಕೆ ಒಪ್ಪಿದೆವು. ಮುಂದಿನ ಕೆಲವು ವಾರಗಳಲ್ಲಿ ಅವರು ಹುಡುಕಬೇಕಾದ ವಸ್ತುಗಳ ಪಟ್ಟಿಯನ್ನು ನಾವು ಅವರಿಗೆ ನೀಡಿದೆವು.

ಎರಡನೆಯದಾಗಿ, ನಾನು ನನ್ನ ಏಳನೇ ತರಗತಿಯ ವಿದ್ಯಾರ್ಥಿಗಳಿಗೆ ಅರಣ್ಯ ನಾಶದ ಬಗ್ಗೆ ಬೋಧಿಸಲು ಪ್ರಾರಂಭಿಸುವ ಮೊದಲು, ಸ್ಥಳೀಯ ಅರಣ್ಯ ನಿರ್ವಾಹಕರಿಂದ ಅರಣ್ಯಕ್ಕೆ ಸಂಬಂದಿಸಿದಂತೆ ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ನಮ್ಮ ವಿದ್ಯಾರ್ಥಿಗಳೊಂದಿಗೆ ಮಾತನಾಡುವಂತೆ ಆಹ್ವಾನಿಸುವ ಸಲುವಾಗಿ ನಮ್ಮ ಮುಖ್ಯೋಪಾಧ್ಯಾಯರ ಅನುಮತಿಯನ್ನು ನಾನು ಪಡೆದುಕೊಂಡೆನು.

ನಾನು ಮನೆಗೆ ಹೋಗಿ ನನ್ನ ಪಾಠಯೋಜನೆಯನ್ನು ಸಿದ್ಧ ಪಡಿಸಿಕೊಳ್ಳಲು ಆರಂಭಿಸಿದೆ. ಅರಣ್ಯ ನಿರ್ವಾಹಕರು ನಮ್ಮ ಶಾಲೆಗೆ ಬರಲು ಒಪ್ಪಿದಲ್ಲಿ, ಅವರಿಗೆ ನನ್ನ ತರಗತಿಯ ವಿದ್ಯಾರ್ಥಿಗಳಿಗೆ ನಾನು ನಿಗದಿಪಡಿಸಿಕೊಂಡಿದ್ದ ಕಲಿಕಾ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ಹೇಗೆ ತಿಳಿಸಬೇಕು ಎಂದು ಆಲೋಚಿಸಿದೆ.

### ಚಿಂತನೆಗೊಂದು ಕ್ಷಣ

- ಚಟುವಟಿಕೆ 1 ರಲ್ಲಿರುವ ನಿಮ್ಮ ಪಟ್ಟಿಯು, ಮೇಲೆ ನೀಡಿರುವ ಸಂದರ್ಭ ಅಧ್ಯಯನದ ಪಟ್ಟಿಯೊಂದಿಗೆ ಹೇಗೆ ಹೋಲಿಕೆಯಾಗುತ್ತದೆ?
- ಈ ಸಂದರ್ಭ ಅಧ್ಯಯನವು ಬೇರೆ ಇನ್ನಾವುದಾದರೂ ಅವಕಾಶಗಳನ್ನು ನಿಮ್ಮ ಪಟ್ಟಿಗೆ ಸೇರಿಸುವ ಸೂಚನೆಗಳನ್ನು ನೀಡಿತೇ? ಹಾಗಿದ್ದರೆ, ಅದನ್ನು ಈಗ ಸೇರಿಸಿ.
- ನಿಮ್ಮ ಅಥವಾ ನಿಮ್ಮ ಸಹಪಾಠಿಗಳ ಬೋಧನೆಗೆ ಸಹಾಯವಾಗುವಂತೆ ವಸ್ತುಗಳನ್ನು ಸಂಗ್ರಹಿಸಿ ನೀವು ತರಗತಿಯಲ್ಲಿ ಅಥವಾ ಶಾಲೆಯಲ್ಲಿ ಒಂದು ಸಂಪನ್ಮೂಲದ ಆಧಾರವನ್ನು ಹೇಗೆ ಬೆಳೆಸಬಹುದು?
- ಇನ್ನೂ ಇತರೆ ಯಾವ ವಿಧಾನಗಳ ಮೂಲಕ ನೀವು ಸಂಪನ್ಮೂಲಯುತವಾಗಿರಬಹುದು? ಉದಾಹರಣೆಗೆ, ನಿಮ್ಮ ವಿದ್ಯಾರ್ಥಿಗಳೊಂದಿಗೆ ಮಾತನಾಡಲು ನೀವು ಯಾರಾದರೂ ಒಬ್ಬ ವ್ಯಕ್ತಿಯನ್ನು ನಿಮ್ಮ ಶಾಲೆಗೆ ಆಹ್ವಾನಿಸುವ ಬಗ್ಗೆ ಯೋಚಿಸಿರುವಿರೇ?

ಅದು ಹಾಗಿರಲಿ, ನಿಮ್ಮ ಶಾಲೆಯಲ್ಲಿ ಇರುವ ಅಥವಾ ಇಲ್ಲದಿರುವ ಸಂಪನ್ಮೂಲಗಳನ್ನು ಾಸ್ತಾನಿಗೆ ತೆಗೆದುಕೊಂಡು, ನಿಮ್ಮಲ್ಲಿರುವ ಸಂಪನ್ಮೂಲಗಳನ್ನು ಹೇಗೆ ವಿಸ್ತರಿಸಬಹುದು ಎಂದು ಆಲೋಚಿಸಿ. ಇದರಿಂದ ನಿಮ್ಮ ಬೋಧನೆಗೆ ಬೆಂಬಲಿಸುವಂತಹ ಯಾವ ಸಂಪನ್ಮೂಲಗಳಿವೆ ಎಂಬುದರ ಬಗ್ಗೆ ನಿಮಗೆ ತಿಳುವಳಿಕೆ ಉಂಟು ಮಾಡಲು ಸಹಾಯ ಮಾಡುವುದು ಮಾತ್ರವಲ್ಲದೇ, ನೀವು ಬಳಸಬಹುದಾದ ಸಂಪನ್ಮೂಲಗಳ ಬಗ್ಗೆ ಮತ್ತು ಸ್ಥಳೀಯ ಕ್ಷೇತ್ರದಲ್ಲಿ ಲಭ್ಯವಿರುವ ಸಂಪನ್ಮೂಲಗಳ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಆಲೋಚಿಸುವಂತೆ ಮಾಡುತ್ತದೆ. ಇತರೆ ಶಿಕ್ಷಕರೊಂದಿಗೆ ಮಾತನಾಡುವುದರಿಂದ ಒಂದು ಯೋಜಿತ ಚಟುವಟಿಕೆಗೆ ಸಂಪನ್ಮೂಲಗಳನ್ನು ಬಳಸುವ ವಿಧಾನಗಳ ಬಗ್ಗೆ ಹೆಚ್ಚು ಆಳವಾಗಿ ಆಲೋಚಿಸುವಂತೆ ಮಾಡುತ್ತದೆ. ಹೆಚ್ಚು ಕ್ರಿಯಾತ್ಮಕ ವಿಧಾನಗಳ ಮೂಲಕ ಕೆಲಸ ನಿರ್ವಹಿಸುವುದರಿಂದ ನಿಮ್ಮ ವಿದ್ಯಾರ್ಥಿಗಳ ಮೇಲೆ ಆಗುವ ಪರಿಣಾಮವನ್ನು ಸುಲಭವಾಗಿ ನೋಡಬಹುದು.

## 3 ಹೊ ರಗಿನ ಪರಿಸರವನ್ನು ಬಳಸುವುದ ರಿಂದ ಆಗುವ ಪ್ರಯೋಜನಗಳು

ಸ್ಥಳೀಯ ಹೊರಗಿನ ಪರಿಸರವನ್ನು ಬಳಸುವುದರಿಂದ:

- ಕಲಿಕೆಯನ್ನು ಸಾಂದರ್ಭೀಕರಿಸಲು ನೆರವಾಗುತ್ತವೆ ಏಕೆಂದರೆ ಇದು ಒಂದು ಯತಾರ್ಥವಾದ ವ್ಯವಸ್ಥೆಯಲ್ಲಿ ನಡೆಯುತ್ತದೆ
- ನಿಮ್ಮ ವಿದ್ಯಾರ್ಥಿಗಳಿಗೆ ನೈಜ ಪ್ರಪಂಚದ ಅರಿವು ಹಾಗೂ ವೈಜ್ಞಾನಿಕ ಪರಿಕಲ್ಪನೆಗಳ ನೇರ ಗ್ರಹಿಕೆಗೆ ನೆರವಾಗುತ್ತದೆ
- ಕಲಿಕೆಯನ್ನು ನಿಷ್ಕ್ರಿಯವಾಗಿಸುವ ಬದಲು ಹೆಚ್ಚು ಕ್ರಿಯಾತ್ಮಕವಾಗಿಸುತ್ತದೆ
- ವಿದ್ಯಾರ್ಥಿಗಳಿಗೆ ವೀಕ್ಷಣಾ ಕೌಶಲಗಳನ್ನು ಬಳಸುವುದಕ್ಕೆ, ಸಾಕ್ಷ್ಯಧಾರಗಳನ್ನು ಸಂಗ್ರಹಿಸುವುದಕ್ಕೆ ಮತ್ತು ನಿರ್ಣಯವನ್ನು ತೆಗೆದುಕೊಳ್ಳಲು ನೈಜ ಅವಕಾಶಗಳನ್ನು ಒದಗಿಸುತ್ತದೆ
- ಅವರ ಸಾಮರ್ಥ್ಯ ಅಥವಾ ಕಲಿಕಾ ಅಗತ್ಯತೆಗಳು ಏನೇ ಇದ್ದರೂ ಸಹ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ತೊಡಗಿಸುವಂತೆ ಮಾಡುತ್ತದೆ
- ವಿದ್ಯಾರ್ಥಿಗಳಿಗೆ ತಮ್ಮ ವೈಯಕ್ತಿಕ ಮತ್ತು ಸಾಮಾಜಿಕ ಸಂವಹನ ಕೌಶಲಗಳನ್ನು ವೃದ್ಧಿಸಿಕೊಳ್ಳಲು ಅವಕಾಶಗಳನ್ನು ಒದಗಿಸುತ್ತದೆ
- ವಿದ್ಯಾರ್ಥಿಗಳಿಗೆ 'ಅಸ್ತವ್ಯಸ್ತ' ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ಚಲನಶೀಲರಾಗಿರಲು ಹೆಚ್ಚು ಅವಕಾಶಗಳನ್ನು ನೀಡುತ್ತದೆ
- ಕಲಿಕಾ ಅನುಭವಗಳನ್ನು ಹೆಚ್ಚು ಅವಿಸ್ಮರಣೀಯವನ್ನಾಗಿಸುತ್ತದೆ
- ಹೆಚ್ಚು ಸ್ವಪ್ರೇರಿತ ಅಥವಾ ಅನಿರೀಕ್ಷಿತ ಕಲಿಕಾ ಅವಕಾಶಗಳನ್ನು ಒದಗಿಸುತ್ತದೆ
- ವಿದ್ಯಾರ್ಥಿಗಳ ಆಲೋಚನಾ ಕೌಶಲಗಳನ್ನು ಪ್ರೋತ್ಸಾಹಿಸುತ್ತದೆ
- ಸ್ಥಳೀಯ ಸಮುದಾಯದೊಂದಿಗೆ ಬಾಂಧವ್ಯವನ್ನು ಬೆಳೆಸುತ್ತದೆ

ಇಂತಹ ಪ್ರಯೋಜನಗಳು ನಿಮ್ಮ ವಿದ್ಯಾರ್ಥಿಗಳ ಗ್ರಹಿಕೆಯನ್ನು ಹೆಚ್ಚಿನ ಮಟ್ಟದಲ್ಲಿ ಪ್ರೋತ್ಸಾಹಿಸುತ್ತದೆ ಮತ್ತು ಸಮುದಾಯದೊಂದಿಗೆ ತಮ್ಮ ಅನುಭೂತಿಯನ್ನು ಬೆಳೆಸುತ್ತದೆ. ಶಿಕ್ಷಕರಾಗಿ ನೀವು ನಿಮ್ಮ ವಿದ್ಯಾರ್ಥಿಗಳನ್ನು ತರಗತಿಯ ಹೊರಗೆ ಶಾಲಾ ಮೈದಾನಕ್ಕೆ ಅಥವಾ ಇನ್ನೂ ಮುಂದೆ ಇರುವ ಹೊರಗಿನ ಪರಿಸರಕ್ಕೆ ಕರೆದುಕೊಂಡು ಹೋಗುವುದರಿಂದ ಅನೇಕ ವಿಷಯಗಳ ವ್ಯಾಪ್ತಿಯನ್ನು ಒಂದು ಸ್ವಾಭಾವಿಕ ಪರಿಸರದಲ್ಲಿ ಆವರಿಸಬಹುದು.

ನೀವು ಒಂದು ಹಳ್ಳಿಯಲ್ಲಿರುವ ಶಾಲೆಯಲ್ಲಿ ಶಿಕ್ಷಕರಾಗಿದ್ದರೆ. ನಿಮ್ಮ ವಿದ್ಯಾರ್ಥಿಗಳನ್ನು ಹೊಲ, ಗದ್ದೆ ಅಥವಾ ಕೆರೆಯವರೆಗೂ ಒಂದು ಪ್ರಕೃತಿ ನಡಿಗೆಗಾಗಿ ಅಥವಾ ಇನ್ನಿತರೆ ಚಟುವಟಿಕೆಗಳಿಗಾಗಿ ಕರೆದುಕೊಂಡು ಹೋಗಬಹುದು. ನೀವು ನಗರದಲ್ಲಿರುವ ಶಾಲೆಯಲ್ಲಿ ಶಿಕ್ಷಕರಾಗಿದ್ದರೆ ನಿಮ್ಮ ವಿದ್ಯಾರ್ಥಿಗಳನ್ನು ಉದ್ಯಾನವನಗಳು, ತೋಟಗಳು, ವಿವಿಧ ಸಸ್ಯಗಳನ್ನು ಬೆಳೆಸುವ ನರ್ಸರಿಗಳಿಗೆ ಅಥವಾ ಒಂದು ಪ್ರಾಣಿ ಸಂಗ್ರಹಾಲಯಕ್ಕೆ ಕರೆದುಕೊಂಡು ಹೋಗಬಹುದು.

ಮುಂದಿನ ಸಂದರ್ಭ ಅಧ್ಯಯನದಲ್ಲಿ ಶಿಕ್ಷಕರು ತಮ್ಮ ಶಾಲಾ ಮೈದಾನದಲ್ಲಿರುವ ಕಿರು ಆವಾಸಗಳನ್ನು ಪರಿಶೋಧಿಸುವರು.

## ಸಂದರ್ಭ ಅಧ್ಯಯನ 3: ಶ್ರೀಮತಿ ಗೀತಾರವರ ತರಗತಿಯ ಹೊರಗಿನ ಪಾಠ

*ಶ್ರೀಮತಿ ಗೀತಾ ವಿದ್ಯಾರ್ಥಿಗಳಿಗೆ ಆವಾಸದ ಕುರಿತು ವಿವರಿಸಲು ಹೇಳಿದಾಗ, ಸ್ಥಳೀಯವಾಗಿ ಕಾಣುವ ಕಿರು ಆವಾಸದ ಉದಾಹರಣೆಗಳನ್ನು ನೀಡದೆ, ಕೇವಲ ಬೃಹತ್ ಆವಾಸಗಳನ್ನು ಮಾತ್ರ ಹೇಳಿದ್ದನ್ನು ಗಮನಿಸಿದರು. ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲ ಪರಿಸರದಲ್ಲಿ ಕಾಣಸಿಗುವ ಆವಾಸಗಳನ್ನು ಗುರುತಿಸುವಂತಾಗಲು, ಅಕೆಯೊಂದು ಹೊರಾಂಗಣ ಚಟುವಟಿಕೆ ನಡೆಸಲು ನಿರ್ಧರಿಸಿದರು.*

"ಒಂದು ವಾರದ ಮೊದಲು ನಾನು ಮಾಡಲು ಯೋಜಿಸಿದ ಚಟುವಟಿಕೆಯೆಂದರೆ, ನಾನು ಶಾಲೆಯು ಕಾಣಸಿಗುವ ಅವಾಸಗಳನ್ನು ಹುಡುಕಲು ನಾನು ಶಾಲೆಯ ಮೈದಾನದ ಸುತ್ತ ಓಡಾಡಿದೆ. ಹಾಸುಕಲ್ಲುಗಳ ನಡುವಿನ ಬಿರುಕು, ದೊಡ್ಡ ಕಲ್ಲು, ಕೊಳೆತ ಮರದ ರೆಂಬೆ ಮತ್ತು ಹುಲ್ಲುಹಾಸಿನ ಭಾಗವು ಸಹ ಇದರಲ್ಲಿ ಸೇರಿದ್ದವು. ಪ್ರತಿಯೊಂದು ಗುಂಪಿಗೂ ಸಿಗುವ ಹಾಗೆ ನಾನು ಪ್ರಶ್ನೆಗಳ ಗುಂಪನ್ನು ತಯಾರಿಸಿದೆ. ನಾನು ನಿಗದಿಪಡಿಸಿದ ಸ್ಥಳದಲ್ಲಿ ಯಾವುದೇ ಅಪಾಯಕಾರಿ ಗಿಡ ಮತ್ತು ವಸ್ತುಗಳಿಲ್ಲದ ಸುರಕ್ಷಿತ ಸ್ಥಳ ಎಂಬುದನ್ನು ಪಾಠ ಮಾಡುವ ಮುನ್ನ ದಿನ ಪರಿಶೀಲಿಸಿದೆ. ತರಗತಿಯಲ್ಲಿ, ಅವಾಸ ಎಂದರೇನು ಎಂದು ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳಿ, ಈ ಚಟುವಟಿಕೆಯನ್ನು ಪರಿಚಯಿಸುತ್ತಾ, ನಾನು ಕಪ್ಪು ಹಲಿಗೆಯ ಮೇಲೆ ಎಲ್ಲರು ಒಪ್ಪಿಕೊಂಡ ವ್ಯಾಖ್ಯಾನವನ್ನು ಬರೆದೆ :

"ಒಂದು ಗುಂಪಿನ ಪ್ರಾಣಿ ಮತ್ತು ಸಸ್ಯಗಳು ವಾಸಿಸುತ್ತಿರುವ ಮತ್ತು ಅವುಗಳಿಗೆ ಅಲ್ಲಿ ಆಹಾರ ಹಾಗೂ ಆಶ್ರಯವನ್ನು ಒದಗಿಸಿರುವ ಸ್ಥಳವೇ ಅವಾಸ."

ನನ್ನ ತರಗತಿಯಲ್ಲಿ ೩೨ ವಿದ್ಯಾರ್ಥಿಗಳಿದ್ದು ನಾನು ವಿದ್ಯಾರ್ಥಿಗಳನ್ನು ೪ ಜನರ ಗುಂಪು ಮಾಡಿ, ಅವರೇನು ಮಾಡಬೇಕೆಂಬುದನ್ನು ತಿಳಿಸಿದೆ. ಕಪ್ಪು ಹಲಗೆಯ ಮೇಲೆ ನಿರ್ದೇಶನಗಳನ್ನು ಬರೆದೆ. ನಾನು ಸಂಖ್ಯೆಗಳನ್ನು ನಿಗದಿ ಪಡಿಸಿದ ಸ್ಥಳಕ್ಕೆ ಅವರು ಹೋಗಿ ಆವಾಸ ಸ್ಥಾನಗಳ ಬಗ್ಗೆ ತಮ್ಮ ವಿಚಾರಣೆಯನ್ನು ನಡೆಸಿದರು.

ಮೊದಲಿಗೆ ನಾನು ಅವರನ್ನು ಕಳುಹಿಸುವ ಜಾಗ ಆವಾಸ ಸ್ಥಾನವೇ ಎಂದು ನಿರ್ಧರಿಸಬೇಕಿತ್ತು. ಚರ್ಚೆಗೆ ಸಮಯ ಕೊಟ್ಟು, ಗುಂಪಿನಲ್ಲಿ ಅವರು ತೀರ್ಮಾನಿಸಿದ ನಂತರ ಅವರ ಆ ತೀರ್ಮಾನಕ್ಕೆ ಹೇಗೆ ಬಂದರು ಎಂಬುದನ್ನು ವಿವರಿಸಲು ಹೇಳಿದೆ. ಗುಂಪಿನಲ್ಲಿ ಅವರಿಗೆ ಅನುಮಾನ ಅಥವಾ ಒಪ್ಪಿಗೆಯಿಲ್ಲವೆಂದರೆ ನಾವು ಒಪ್ಪಿ ಬರೆದಿದ್ದ ವ್ಯಾಖ್ಯಾನಕ್ಕೆ ತೆರಳಿದೆವು. ಕಲ್ಲು ಮತ್ತು ಹಾಸುಕಲ್ಲುಗಳು ಅವಾಸವಲ್ಲವೆಂದು ನನ್ನ ವಿದ್ಯಾರ್ಥಿಗಳು ಹೇಳಿದರು. ಆದರೆ ಕೊಳೆತ ಮರದ ರಂಬೆ ಮತ್ತು ಹುಲ್ಲುಹಾಸಿನ ಭಾಗವನ್ನು ಆವಾಸವೆಂದು ತೀರ್ಮಾನಿಸಿದ್ದರು.

ನಾನು ನನ್ನ ವಿದ್ಯಾರ್ಥಿಗಳಿಗೆ ಕೊಟ್ಟ ಕೆಲಸವೆಂದರೆ :

ಆವಾಸವೆಂದು ಸಾಬೀತುಪಡಿಸಲು ಯಾವ ಆಧಾರಗಳನ್ನು ಅರಸಬೇಕು ಮತ್ತು ಯಾವ ರೀತಿಯ ಮಾಹಿತಿ ಸಂಗ್ರಹಿಸಬೇಕು?

ತಮ್ಮ ಪ್ರದೇಶದಲ್ಲಿ ಬೆಳೆಯುತ್ತಿರುವ ಅಥವಾ ವಾಸಿಸುತ್ತಿರುವ ಜೀವಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಸಸ್ಯ ಅಥವಾ ಪ್ರಾಣಿಗೆ ಹಾನಿಯಾಗದಿದ್ದರೆ ಅವರು ಇನ್ನಿತರ ಸಾಕ್ಷಿಯನ್ನೂ ತಂದೊಡ್ಡಬಹುದು.

ಒಮ್ಮೆ ಹೊರಾಂಗಣದಲ್ಲಿ ಕೆಲವು ಗುಂಪುಗಳು ತ್ವರಿತವಾಗಿ ಆವಾಸಗಳನ್ನು ಗುರುತಿಸಿದರೆ, ಮತ್ತೆ ಕೆಲವರಿಗೆ ಅದನ್ನು ಹುಡುಕಲು ಸಹಾಯ ಬೇಕಿತ್ತು. ಕೆಲವರು ಅವರಿಗೆ ಸಿಕ್ಕ ಚಿಕ್ಕ ಜೀವಿಗಳ ಚಿತ್ರ ಬಿಡಿಸಿದರೆ ಮತ್ತೆ ಕೆಲವರು ಅದರ ಭಾಗಗಳನ್ನು ಗುರುತಿಸಿ, ಟಿಪ್ಪಣಿ ಬರೆದರು. ವಿದ್ಯಾರ್ಥಿಗಳು ಅವಾಸದಲ್ಲಿ ದೊರೆತ ಮಣ್ಣು ಮತ್ತು ಸಸ್ಯದ ಭಾಗಗಳನ್ನು ಸಂಗ್ರಹಿಸಿದ್ದರು. ಒಂದು ಕಲ್ಲನ್ನು ಎತ್ತಿದಾಗ ಅದರ ಕೆಳಗೆ ಕಂಡ ಚಿಕ್ಕ ಜೇಡ ಮತ್ತು ಮರದಹೇನುಗಳನ್ನು ನೋಡಿ ಆಶ್ಚರ್ಯಗೊಂಡರು. ಕಲ್ಲಿನ ಕೆಳಗಿರುವ ತೇವಾಂಶವನ್ನು ಗುರುತಿಸಿದರು ಮತ್ತು ಕೊಳತ ಸಸ್ಯವರ್ಗದ ನಮೂನೆಯನ್ನು ಸಂಗ್ರಹಿಸದರು.

ಕಲ್ಲು ಹಾಸಿನ ಬಿರುಕಿನಿಂದ ಹೊರಬರುತ್ತಿರುವ ಸಣ್ಣ ಸಸ್ಯಗಳನ್ನು ವಿದ್ಯಾರ್ಥಿಗಳ ಒಂದು ಗುಂಪು ಬಹಳ ಸೂಕ್ಷ್ಮವಾಗಿ ವೀಕ್ಷಿಸಿದರು. ಎಲೆಗಳ ಕೆಳಗಿರುವ ಸಣ್ಣ ಗಿಡಹೇನುಗಳನ್ನು ಇರುವೆಗಳು ತಿನ್ನುತ್ತಿರುವುದನ್ನು ಸಹ ಭೂತಗನ್ನಡಿ ಮೂಲಕ ಅವರು ವೀಕ್ಷಿಸಿದರು. ಅಲ್ಲಿಯೇ ಹುಲ್ಲಿನ ಮೇಲೆ ಗುಂಪುಗಳಲ್ಲಿ ಕುಳಿತುಕೊಳ್ಳಲು ನಾನು ಅವರಿಗೆ ಸೂಚಿಸಿದೆ. ನಾನು ಅವರಿಗೆ ಆವಾಸವೆಂದು ಸಾಬೀತುಪಡಿಸಲು ಬೇಕಾದ ಮಾಹಿತಿಯನ್ನು ಪ್ರಸ್ತುತಪಡಿಸಲು ಹೇಳಿದೆ. ಅವರು ಆವಾಸದ ಬಗ್ಗೆ ತಮ್ಮ ಅರಿವು ಬದಲಾಗಿರುವುದಾಗಿ ಒಪ್ಪಿದರು ಮತ್ತು ಕಲ್ಲು ಹಾಸಿನ ಕೆಳಗಿದ್ದ ಸ್ಥಳ ಕೂಡ ಆವಾಸವೆನಿಸುತ್ತದೆ ಎಂದು ಅರಿತುಕೊಂಡರು

ವಿದ್ಯಾರ್ಥಿಗಳಿಗೆ ತಾವೇ ಮಾಡಿ ನೋಡುವ ಅನುಭವವನ್ನು ಒದಗಿಸಿದಾಗ, ಅದು ಅವರ ಕಲಿಕೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ಶಾಲಾವರಣದಲ್ಲಿ ಗಮನಿಸಿದ ಆವಾಸಗಳ ಕುರಿತು ನಾನು ತರಗತಿಯಲ್ಲಿ ವಿವರಿಸಬಹುದಿತ್ತು, ಆದರೆ ನಾನು ಅವರಿಗೆ ಸ್ವತ: ಅನ್ವೇಷಣೆ ಮಾಡಲು ಅವಕಾಶ ಕೊಟ್ಟಿದ್ದು, ಆಳವಾದ ಅರಿವನ್ನು ಮೂಡಿಸಿ ಅವರನ್ನು ಹೆಚ್ಚು ಉತ್ಸುಕರನ್ನಾಗಿ ಮಾಡಿತು ಎಂದು ನನಗನಿಸಿತು. ನನ್ನ ವಿದ್ಯಾರ್ಥಿಗಳ ಉತ್ಸಾಹ ನಂತರದ ತರಗತಿಗಳಲ್ಲಿಯೂ ಹಾಗೆಯೇ ಉಳಿದಿತ್ತು. ಪ್ರತಿ ಆವಾಸ ಸ್ಥಾನದಲ್ಲಿದ್ದ ಜೀವಿಗಳನ್ನು ಗುರುತಿಸಿ ನಮ್ಮಲ್ಲಿದ್ದ ನಿಧಿಯನ್ನು ಬಳಸಿ ಅವುಗಳ ರೇಖಾಚಿತ್ರವನ್ನು ಮಾಡಿದೆವು".

**ವಿಡಿಯೋ: ಗುಂಪು ಕಾರ್ಯವನ್ನು ಬಳಸುವುದು**



## 4 ತರಗತಿಯ ಹೊ ರಗಿನ ಪಾಠಗ  ಳು

ನಿಮ್ಮ ಪಾಠವನ್ನು ತರಗತಿಯ ಹೊರಗಡೆ ಬೋಧಿಸುವುದರಿಂದ ನಿಮ್ಮ ಪಾಠ ಯೋಜನೆಗೆ ಯಾವು ’ೀ ರೀತಿಯ ಹೆಚ್ಚಾದ ಒತ್ತಾಯ ಮಾಡುವಂತಿರಬಾರದು. ಪ್ರಾಥಮಿಕ ಶಾಲೆಯ ವಿಜ್ಞಾನವನ್ನು ಪರಿಶೋಧಿಸಲು ಶಾಲಾ ಮೈದಾನವನ್ನು ಬಳಸುವುದು. ವಿದ್ಯಾರ್ಥಿಗಳಿಗೆ ಅಭ್ಯಾಸವಾದಂತೆ, ತರಗತಿಯ ಹೊರಗಿನ ಕಲಿಕೆಯು ನಿಮ್ಮ ಪಾಠ ಬೋಧನೆಯ ಒಂದು ಅವಿಭಾಜ್ಯ ಭಾಗವಾಗಿ ಪರಿಣಮಿಸುತ್ತದೆ. ಹೆಚ್ಚಿನ ವಿದ್ಯಾರ್ಥಿಗಳಿರುವ ತರಗತಿಗಳಲ್ಲಿ ನೀವು ಇಂತಹ ಚಟುವಟಿಕೆಗಳನ್ನು ಮಾಡುವ ಅವಶ್ಯಕತೆಯಿರುತ್ತದೆ ಏಕೆಂದರೆ ಅವರಿಗೆ ಒಂದು ನಿರ್ದಿಷ್ಟ ಸಮಯದಲ್ಲಿ ತರಗತಿಯ ಹೊರಗೆ ಕಲಿಕಾ ಅನುಭವವಾಗುತ್ತದೆ. ಹಾಗೂ, ನಿಮ್ಮ ತರಗತಿಯಲ್ಲಿ ವಿಶೇಷ ಶೈಕ್ಷಣಿಕ ಅಗತ್ಯತೆ ಇರುವ ಮಕ್ಕಳಿದ್ದರೆ, ಅಂತಹ ಮಕ್ಕಳನ್ನು ಅವರಿಗೆ ಬೆಂಬಲ ನೀಡುವಂತಹ ವಿದ್ಯಾರ್ಥಿಗಳ ಗುಂಪಿನಲ್ಲಿ ಸೇರಿಸಿ ಮತ್ತು ಹೊರಗಿನಿಂದಲೇ ಅವರ ಕಾರ್ಯಗಳನ್ನು ನಿರ್ವಹಣೆ ಮಾಡಿ.

ಮುಂದಿನ ಚಟುವಟಿಕೆಯಲ್ಲಿ ನೀವು ತರಗತಿಯ ಹೊರಗಡೆ ಮಾಡಬಹುದಾದ ಒಂದು ಪಾಠವನ್ನು ಯೋಜಿಸುವಿರಿ.

### ಚಟುವಟಿಕೆ 3: ತರಗತಿಯ ಹೊರಗೆ ಮಾಡುವ ಪಾಠವನ್ನು ಯೋಜಿಸುವುದು

ನಿಮ್ಮ ತರಗತಿಯ ವಿದ್ಯಾರ್ಥಿಗಳಿಗೆ ನೀವು ಬೋಧಿಸಬೇಕೆಂದಿರುವ ವಿಷಯಕ್ಕೆ ನಿಮ್ಮ ಪಠ್ಯಪುಸ್ತಕದಲ್ಲಿರುವ ಒಂದು ಚಟುವಟಿಕೆಯನ್ನು ಆಯ್ಕೆ ಮಾಡಿಕೊಳ್ಳಿ. ಉದಾಹರಣೆಗೆ, 3ನೇ ತರಗತಿಯ ಪಠ್ಯಪುಸ್ತಕದ ಅಧ್ಯಾಯ 2ರಲ್ಲಿರುವ 'ಸಸ್ಯ ದೇವತೆ' ಅಥವಾ ಎರಡನೇ ತರಗತಿ ಪಠ್ಯಪುಸ್ತಕದಲ್ಲಿನ 'ಸಸ್ಯಗಳ ಬಗ್ಗೆ ತಿಳಿಯುವುದು' ಅಥವಾ ಆರನೇ ತರಗತಿಯ 'ಸಜೀವಿಗಳು ಮತ್ತು ಅವುಗಳ ವಾತಾವರಣ' ಎಂಬುದನ್ನು ಆಯ್ಕೆ ಮಾಡಿಕೊಳ್ಳಬಹುದು.

ತರಗತಿಯ ಹೊರಗೆ ನಿಮ್ಮ ಶಾಲಾ ಮೈದಾನದಲ್ಲಿ ಇರುವ ಒಂದು ನಿರ್ದಿಷ್ಟ ಸ್ಥಳ ಅಥವಾ ನಿಮ್ಮ ಶಾಲೆಗೆ ಹತ್ತಿರವಿರುವ ಒಂದು ಸ್ಥಳೀಯ ಪ್ರದೇಶವನ್ನು ಬಳಸಿಕೊಳ್ಳುವಂತೆ ಒಂದು ವಿವರವಾದ ಪಾಠಯೋಜನೆಯನ್ನು ಸಿದ್ಧಪಡಿಸಿಕೊಳ್ಳಿ. ನೀವು ಕೆಳಗೆ ನೀಡಿರುವ ಪ್ರಶ್ನೆಗಳನ್ನು ಪರಿಗಣಿಸುವ ಅವಶ್ಯಕತೆಯಿದೆ:

- ನಿಮ್ಮ ವಿದ್ಯಾರ್ಥಿಗಳು ಏನನ್ನು ಕಲಿಯಬೇಕೆಂದು ನೀವು ಬಯಸುವಿರಿ?
- ನಿಮ್ಮ ವಿದ್ಯಾರ್ಥಿಗಳನ್ನು ಎಲ್ಲಿಗೆ ಕರೆದುಕೊಂಡು ಹೋಗುವಿರಿ?
- ಯಾವ ರೀತಿಯ ಸುರಕ್ಷತಾ ಸಮಸ್ಯೆಗಳ ಬಗ್ಗೆ ನೀವು ವಿಚಾರ ಮಾಡುವ ಅಗತ್ಯತೆಯಿದೆ?
- ಯಾವ ರೀತಿಯ ಉಪಕರಣಗಳು ನಿಮ್ಮ ಸಿದ್ಧತೆಗೆ ಅಗತ್ಯತೆಯಿದೆ?
- ನೀವು ಚಟುವಟಿಕೆಯನ್ನು ಹೇಗೆ ಪ್ರಾರಂಭಿಸುವಿರಿ?
- ನೀವು ನಿಮ್ಮ ವಿದ್ಯಾರ್ಥಿಗಳಿಗೆ ಯಾವ ಪ್ರಶ್ನೆಗಳನ್ನು ಕೇಳುವಿರಿ?
- ನಿರ್ದಿಷ್ಟವಾದ ಕಲಿಕಾ ಅಗತ್ಯತೆ ಇರುವ ವಿದ್ಯಾರ್ಥಿಗಳನ್ನು ನೀವು ಹೇಗೆ ಬೆಂಬಲಿಸುವಿರಿ?
- ನಿಮ್ಮ ವಿದ್ಯಾರ್ಥಿಗಳು ಇನ್ನೂ ಹೆಚ್ಚು ಆಳವಾಗಿ ಆಲೋಚಿಸುವಂತೆ ಮಾಡಲು, ನೀವು ನಿಮ್ಮ ಪ್ರಶ್ನೆಗಳನ್ನು ಹೇಗೆ ಮುಕ್ತ ಪ್ರಶ್ನೆಗಳಾಗಿ ಬದಲಾಯಿಸುವಿರಿ?
- ಅವರು ಪ್ರಶ್ನೆಗಳನ್ನು ಉತ್ತರಿಸಲು ಯಾವ ರೀತಿಯ ಚಟುವಟಿಕೆಗಳನ್ನು ಮಾಡಬೇಕೆಂದು ನೀವು ಸಲಹೆ ನೀಡುವಿರಿ?
- ವಿದ್ಯಾರ್ಥಿಗಳು ತಮ್ಮ ದತ್ತಾಂಶವನ್ನು ಹೇಗೆ ದಾಖಲಿಸುವರು?
- ಚಟುವಟಿಕೆಯು ಎಷ್ಟು ಬಗೆಯ ಮೌಲ್ಯಾಂಕನ ಅವಕಾಶಗಳನ್ನು ಒದಗಿಸುತ್ತದೆ?
- ಈ ವಾರವನ್ನು ನೀವು ಹೇಗೆ ಅನುಪಾಲನೆ ಮಾಡುವಿರಿ?

ನಿಮ್ಮ ಪಾಠಯೋಜನೆಯನ್ನು ಪೂರ್ಣಗೊಳಿಸಿದ ನಂತರ, ನಿಮ್ಮ ವಿದ್ಯಾರ್ಥಿಗಳಿಗೆ ಪಾಠ ಬೋಧನೆಯನ್ನು ಮಾಡಿ.

**ಚಿಂತನೆಗೊಂದು ಕ್ಷಣ**

ನಿಮ್ಮ ಪಾಠ ಯೋಜನೆ ಮತ್ತು ಪಾಠ ಬೋಧನೆಯ ನಂತರ, ಕೆಳಗಿನ ಅಂಶಗಳ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ:

- ತರಗತಿಯ ಹೊರಗೆ ಮಾಡಿದ ಪಾಠಬೋಧನೆಯಲ್ಲಿ ಯಾವುದು ಚೆನ್ನಾಗಿ ಮೂಡಿಬಂದಿತು?
- ನಿಮ್ಮ ಪ್ರಕಾರ ಇದಕ್ಕೆ ಕಾರಣವೇನಿರಬಹುದು?
- ಪಾಠ ಬೋಧನೆಯನ್ನು ಇನ್ನೂ ಉತ್ತಮಪಡಿಸುವ ನಿಟ್ಟಿನಲ್ಲಿ ಮುಂದಿನ ಸಲ ನೀವೇನು ಮಾಡಬಹುದು? (ಈ ಪ್ರಶ್ನೆಯನ್ನು ಹೇಗೆ ಉತ್ತರಿಸಬಹುದು ಎಂದು ಆಲೋಚಿಸಲು ನೀವು ಪ್ರಮುಖ ಸಂಪನ್ಮೂಲವಾದ 'ಪಾಠಗಳನ್ನು ಯೋಜಿಸುವುದು' ಇದನ್ನು ಓದಿ.)
- ತರಗತಿಯ ಹೊರಗೆ ಮಾಡಿದ ಪಾಠ ಬೋಧನೆ ಮತ್ತು ನೀವು ನಿಗದಿಪಡಿಸಿದ ಕಾರ್ಯದ ಬಗ್ಗೆ ನಿಮ್ಮ ವಿದ್ಯಾರ್ಥಿಗಳು ಹೇಗೆ ಪ್ರತಿಕ್ರಿಯಿಸಿದರು?
- ನಿಮ್ಮ ವಿದ್ಯಾರ್ಥಿಗಳು ಏನನ್ನು ಕಲಿತರು ಮತ್ತು ಇದನ್ನು ನೀವು ಹೇಗೆ ಅರಿತುಕೊಂಡಿರಿ?

## 5 ಶಾಲಾ ಪ್ರವಾಸಗಳು

ಸಾಕಷ್ಟು ದೂರದ ಶಾಲಾ ಪ್ರವಾಸಗಳು ಹೆಚ್ಚು ಯೋಗ್ಯವೆನಿಸಿಕೊಳ್ಳುತ್ತವೆ. ಸೂಕ್ತವಾಗಿ ಆಯೋಜಿಸಿದ ಪ್ರವಾಸವು, ತರಗತಿಯಲ್ಲಾಗಲಿ ಶಾಲಾ ಮೈದಾನದಲ್ಲಾಗಲಿ ದೊರಕದ ಸಂಪನ್ಮೂಲಗಳು ವಿದ್ಯಾರ್ಥಿಗಳಿಗೆ ಎಟುಕುವಂತೆ ಮಾಡುತ್ತದೆ. ವಿದ್ಯಾರ್ಥಿಗಳ ಕಲಿಕೆಯ ಪರಿಮಿತಿಯನ್ನು ವಿಸ್ತರಿಸಿ ಆತ್ಮ ವಿಶ್ವಾಸವನ್ನು ನಿರ್ಮಿಸುವ ಸಮೃದ್ಧ ಅನುಭವಗಳನ್ನು ಶಾಲಾ ಪ್ರವಾಸಗಳು ಒದಗಿಸುತ್ತವೆ.

ವಾಹನ ಸೌಕರ್ಯಗಳು, ದೊಡ್ಡ ತರಗತಿಗಳು ಮತ್ತು ಖರ್ಚುವೆಚ್ಚಗಳಿಂದ ಇಂಥ ಪ್ರವಾಸವನ್ನು ಆಯೋಜಿಸುವುದು ಯಾವಾಗಲೂ ಸಾಧ್ಯವಾಗುವುದಿಲ್ಲ. ಇದು ಸಾಧ್ಯವಾದಲ್ಲಿ ಮೊದಲಿಗೆ ಭದ್ರತಾ ಕ್ರಮಗಳ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

ಒಮ್ಮೆ ಇದನ್ನು ನಾವು ವ್ಯವಸ್ಥೆಗೊಳಿಸಿದ ಮೇಲೆ, (ಇವುಗಳ ಹಂತಗಳನ್ನು ಚಿತ್ರ 1ರಲ್ಲಿ ತೋರಿಸಲಾಗಿದೆ), ಒಂದು ಸಾಮಾನ್ಯ ಪಾಠವನ್ನು ಯೋಚಿಸಲು ಇದೇ ಅಂಶಗಳನ್ನು ನೀವು ಗಣನೆಗೆ ತೆಗೆದುಕೊಂಡು ಉಪಯೋಗಿಸಬಹುದು.




**ಚಿತ್ರ** 1 ಒಂದು ಶಾಲಾ ಕ್ಷೇತ್ರ ಪ್ರವಾಸವನ್ನು ಯೋಜಿಸುವುದು.

## 6 ತರಗತಿಯ ಹೊರಗಿನ ಪರಿಸರದಲ್ಲಿ ಕಲಿಕೆಯನ್ನುಂಟು ಮಾಡಲು ಅವಕಾಶಗಳು

ಸಸ್ಯಗಳು ಮತ್ತು ವಾಸಸ್ಥಳಗಳಿಗೆ ಸಂಬಂಧಿಸಿದ ಚಟುವಟಿಕೆಗಳು ಹಾಗೂ ವಿಚಾರಗಳನ್ನು ಈ ಘಟಕದಲ್ಲಿ ಪರಿಶೋಧಿಸಲಾಗಿದೆ. ಆದಾಗ್ಯೂ, ಹೊರಾಂಗಣ ಚಟುವಟಿಕೆಗಳನ್ನು ಪ್ರಾಥಮಿಕ ಶಾಲಾ ವಿಜ್ಞಾನದ ಹಲವಾರು ಇತರ ಕ್ಷೇತ್ರಗಳೊಂದಿಗೆ ಸಂಯೋಜನೆಗೊಳಿಸಬಹುದು.

### ಚಟುವಟಿಕೆ 4: ತರಗತಿಯ ಹೊರಗಿನ ಪರಿಸರದಲ್ಲಿ ಕಲಿಕೆಯುನ್ನುಂಟು ಮಾಡಲು ಇರುವ ಪ್ರತಿಯೊಂದು ಅವಕಾಶವನ್ನು ಉಪಯೋಗಿಸುವುದು

ನೀವು ಸ್ವತಃ, ಅಥವಾ ಸಹೋದ್ಯೋಗಿಯೊಂದಿಗೆ, ತರಗತಿಯ ಹೊರಗಡೆ ಮಾಡಬಹುದಾದ ಮುಂದಿನ ಪಾಠವನ್ನು ಬೋಧಿಸಲು ನೀವು ಯೋಜನೆಯನ್ನು ತಯಾರಿಸುವುದಕ್ಕಾಗಿ, ಪಾಠಕ್ಕೆ ಸಂಬಂಧಿಸಿದ ಇತರ ಚಟುವಟಿಕೆಗಳನ್ನು ಪಟ್ಟಿ ಮಾಡಲು ಬುದ್ಧಿಮಂಥನ ಮಾಡಿಕೊಳ್ಳಿ. ಪಾಠವನ್ನು ಯೋಜಿಸಲು ಈ ಮಾಹಿತಿಯನ್ನು ಬಳಸಿಕೊಳ್ಳಿ ಮತ್ತು ನಿಮ್ಮ ಯೋಜನೆಯನ್ನು ತಯಾರಿಸಿ.



**ಚಿಂತನೆಗೊಂದು ಕ್ಷಣ**

- ನಿಮ್ಮ ಬೋಧನೆಯಲ್ಲಿ ತರಗತಿಯ ಹೊರಗಿನ ಚಟುವಟಿಕೆಗಳನ್ನು ಸೇರಿಸುವುದರಿಂದ, ಎಷ್ಟು ವಿಷಯಗಳಿಗೆ ಅನುಕೂಲವಾಗುತ್ತದೆ ಎಂದು ನೀವು ಆಲೋಚಿಸುವಿರಿ?
- ಹೆಚ್ಚು ಯಶಸ್ಸು ಪಡೆಯುವಂತಹ ಪಾಠವನ್ನು ನೀವು ಯೋಚಿಸಲು ಇದು ನಿಮಗೆ ಹೇಗೆ ಸಹಾಯಕವಾಯಿತು?
- ಈ ಪಾಠಕ್ಕೆ ನಿಮ್ಮ ವಿದ್ಯಾರ್ಥಿಗಳು ಹೇಗೆ ಪ್ರತಿಕ್ರಿಯಿಸಿದರು?

ನೀವು ಹಲವಾರು ಸಾಧ್ಯತೆಗಳಿರುವ ಅಂಶಗಳನ್ನು ನಿಮ್ಮ ಪಾಠದಲ್ಲಿ ಉಪಯೋಗಿಸಬಹುದು. ಸ್ಥಳೀಯ ಪರಿಸರವನ್ನು ಉಪಯೋಗಿಸಲು ಸಂಪನ್ಮೂಲ 3ರ ಟೇಬಲ್ ನಲ್ಲಿರುವ ಕೆಲವು ಸಾಧ್ಯತೆಗಳ ಪಟ್ಟಿಯು ನಿಮಗೆ ಸಹಾಯವನ್ನು ಮಾಡುವುದು.

## 7 ಸಾರಾಂಶ

ತರಗತಿಯ ಪರಿಮಿತಿಯೊಳಗೆ ವಿದ್ಯಾರ್ಥಿಗಳ ಕಲಿಕೆಯು ಉಂಟಾಗುವುದಿಲ್ಲ. ಆದಾಗ್ಯೂ ಕಡಿಮೆ ಔಪಚಾರಿಕ ಸನ್ನಿವೇಶದಲ್ಲಿ ಜೊತೆಯಲ್ಲಿರುವ ವಿದ್ಯಾರ್ಥಿಗಳೊಂದಿಗೆ ಸೇರಿರುವುದರಿಂದ ಹಾಗೂ ಹೊರಗಿನ ಪರಿಸರದಲ್ಲಿರುವುದರಿಂದ, ಸ್ವಲ್ಪ ಮಟ್ಟಿನ ಹೆಚ್ಚಿನ ಕಲಿಕೆಯನ್ನು ವಿದ್ಯಾರ್ಥಿಗಳಲ್ಲಿ ಉಂಟುಮಾಡಬಹುದು. ಎಲ್ಲವನ್ನೂ ಉತ್ತಮವಾಗಿ ಸಂಘಟಿಸಲಾಗಿದೆ ಎಂದು ಭಾವಿಸಿಕೊಳ್ಳುತ್ತ, ಒಂದು ಹೊರಾಂಗಣ ಪಾಠವು ಕಲಿಕೆಯನ್ನು ಆಕರ್ಷಕ, ಕ್ರಿಯಾಶೀಲ, ಸಾಮಾಜಿಕ ಹಾಗೂ ಆನಂದದಾಯಕ ಪ್ರಕ್ರಿಯೆಯನ್ನಾಗಿಸುತ್ತದೆ, ಅಲ್ಲಿ ಕಾರ್ಯಶೀಲರಾಗಿ ವಿಜ್ಞಾನದ ಅನುಭವವನ್ನು ನಿಮ್ಮ ವಿದ್ಯಾರ್ಥಿಗಳು ಪಡೆದಂತಾಗುತ್ತದೆ.

ಪಠ್ಯಪುಸ್ತಕಗಳು, ಪೋಸ್ಟರ್ ಗಳು ಹಾಗೂ ಇತರ ಬೋಧನೋಪಕರಣಗಳು ಆಗಾಗ್ಗೆ ಅವಶ್ಯವಾಗಿ ಬಳಸಬೇಕಾದ ತರಗತಿ ಸನ್ನಿವೇಶಕ್ಕೆ ವಿಭಿನ್ನವಾಗಿ, ನಿಮಗೆ ಅವಶ್ಯವಾದ ಎಲ್ಲ ಕಲಿಕಾ ಸಂಪನ್ಮೂಲಗಳನ್ನು ನಿಸರ್ಗವು ಬಹಳಷ್ಟು ಸಾರಿ ಒದಗಿಸುತ್ತದೆ. ಆದ್ದರಿಂದ ಹೊರಗಿನ ಪರಿಸರದ ಕಲಿಕೆ ಕಡಿಮೆ ಸಂಪನ್ಮೂಲಗಳಿರುವ ತರಗತಿಗೆ ಪೂರಕ ಹಾಗೂ ಕಲಿಕೆ ಹೆಚ್ಚಿಸುತ್ತದೆ. ನಿಕಟದಲ್ಲಿರುವ ಬಾಹ್ಯ ಪರಿಸರವನ್ನು ಉಪಯೋಗಿಸುವುದು ಅದರಲ್ಲಿಯೂ, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ತರಗತಿಗೆ ಇದು ಅಮೂಲ್ಯವಾದುದು, ಏಕೆಂದರೆ ಇದು ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು, ಚಿತ್ರಬಿಡಿಸಲು, ಬರೆಯಲು, ಪರಸ್ಪರ ವಿಚಾರ ವಿನಿಮಯ ಮಾಡಲು ಹಾಗೂ ಸುತ್ತಲೂ ಚಲಿಸಲು ಹೆಚ್ಚಿನ ಸ್ಥಳಾವಕಾಶವನ್ನು ನೀಡುತ್ತದೆ.

ತರಗತಿಯ ಹೊರಗಿನ ಪರಿಸರದಲ್ಲಿ ಬಹಳ ಮಟ್ಟಿಗೆ ಯಾವ ಸಮಯದಲ್ಲಾದರೂ ಎಲ್ಲಿಯಾದರೂ ಕಲಿಯಬಹುದಾಗಿದೆ - ಶಾಲಾ ಮೈದಾನದಲ್ಲಿ, ಸ್ಥಳೀಯ ಉದ್ಯಾನವನದಲ್ಲಿ, ಕೈತೋಟ ಅಥವಾ ನರ್ಸರಿಯಲ್ಲಿ, ಹೊಲದಲ್ಲಿ, ಪ್ರಾಣಿ ಸಂಗ್ರಹಾಲಯದಲ್ಲಿ, ಕೆರೆ, ಸರೋವರಗಳು ಮತ್ತು ನದಿಗಳಿಂದ ಹಾಗೂ ವಸ್ತು ಸಂಗ್ರಹಾಲಯದಲ್ಲಿ - ಎಲ್ಲ ಕಡೆ ಕಲಿಕೆಯಾಗುತ್ತದೆ. ಇದು ಒಂದು ಅವಶ್ಯಕ ಕಲಿಕಾ ಮಾರ್ಗವಾಗಿ, ಇದನ್ನು ಬೇಸಿಗೆ ಕಾಲಕ್ಕಾಗಿಯೇ ಮಿತಗೊಳಿಸಬಾರದು ಅಥವಾ ಪರೀಕ್ಷಾ ನಂತರ ಕೇವಲ ಹೊಂದಿಸುವ/ ಸೇರಿಸುವ ಕಾರ್ಯವಾಗಬಾರದು. ನಿಜವಾಗಿ ಹೇಳುವುದಾದರೆ, ಇದು ನಿಮ್ಮ ದಿನನಿತ್ಯ ಬೋಧನಾ ಚಟುವಟಿಕೆಯ ಒಂದು ಭಾಗವಾಗಿರಬೇಕು. ಇದು ಜ್ಞಾನವನ್ನು ಹೆಚ್ಚಿಸಲು ಒಂದು ಪ್ರಭಾವವುಳ್ಳ ಸಾಧನವಾಗಿದೆ. ಸಾಮಾಜಿಕ ಸಂವೇಗಾತ್ಮಕ ಹಾಗೂ ವೈಯಕ್ತಿಕ ಬೆಳವಣಿಗೆಗೆ ಆಧಾರವಾಗಿದೆ ಹಾಗೂ ವಿದ್ಯಾರ್ಥಿಗಳ ಆರೋಗ್ಯ ಹಾಗೂ ಯೋಗಕ್ಷೇಮಕ್ಕಾಗಿ ತನ್ನದೇ ಆದ ಕೊಡುಗೆಯನ್ನು ನೀಡುತ್ತದೆ.

## ಸಂಪನ್ಮೂ ಲಗಳು

## ಸಂಪನ್ಮೂಲ 1: ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು

ಪಠ್ಯಪುಸ್ತಕಗಳನ್ನು ಮಾತ್ರವಲ್ಲದೇ, ಇನ್ನೂ ಅನೇಕ ಕಲಿಕಾ ಸಂಪನ್ಮೂಲಗಳನ್ನು ಬೋಧನೆಯಲ್ಲಿ ಬಳಸಬಹುದಾಗಿದೆ. ವಿವಿಧ ಜ್ಞಾನೇಂದ್ರಿಯಗಳನ್ನು ಬಳಸುವ (ದೃಷ್ಟಿ, ಶ್ರವಣ, ಸ್ಪರ್ಶ, ವಾಸನೆ, ರುಚಿ) ಕಲಿಕಾ ಮಾರ್ಗಗಗಳನ್ನು ತೋರಿಸಿದರೆ, ವಿವಿಧ ವಿಧಾನಗಳಲ್ಲಿ ಕಲಿಯುವ ವಿದ್ಯಾರ್ಥಿಗಳನ್ನು ಮೆಚ್ಚಿಸಿದಂತಾಗುತ್ತದೆ. ನಿಮ್ಮ ಸುತ್ತಮುತ್ತಲೂ ಇರುವ ಸಂಪನ್ಮೂಲಗಳನ್ನು ತರಗತಿಯಲ್ಲಿ ಬಳಸಿ, ನಿಮ್ಮ ವಿದ್ಯಾರ್ಥಿಗಳ ಕಲಿಕೆಗೆ ನೆರವಾಗಬಹುದು. ಯಾವುದೇ ಶಾಲೆಯು ತನ್ನದೇ ಆದ ಕಲಿಕಾ ಸಂಪನ್ಮೂಲಗಳನ್ನು ಅತಿ ಕಡಿಮೆ ವೆಚ್ಚದಲ್ಲಿ ಅಥವಾ ವೆಚ್ಚರಹಿತವಾಗಿ ತಯಾರಿಸಿಕೊಳ್ಳಬಹುದು. ಹೀಗೆ ಸ್ಥಳೀಯ ವಸ್ತುಗಳನ್ನು ಕ್ರೋಡೀಕರಿಸಿ, ನಿಮ್ಮ ವಿದ್ಯಾರ್ಥಿಗಳ ದೈನಂದಿನ ಜೀವನ ಮತ್ತು ಪಠ್ಯಕ್ರಮದ ನಡುವೆ ಜೋಡಣೆ ಮಾಡಲು ಸಾಧ್ಯ. ನಿಮ್ಮ ಹತ್ತಿರದ ಪರಿಸರದಲ್ಲಿಯೇ, ಅನೇಕ ವಿಷಯಗಳಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು ನೀವು ಕಾಣುವಿರಿ. ಹಾಗೆಯೇ ಅನೇಕ ರೀತಿಯ ಸ್ವಾಭಾವಿಕ ಸಂಪನ್ಮೂಲಗಳನ್ನೂ ಸಹ ಕಾಣುವಿರಿ. ಇವುಗಳನ್ನು ಬಳಸಿ ನೀವು ಸ್ಥಳೀಯ ಸಮುದಾಯದೊಡನೆ ಸಂಬಂಧ ಕಲ್ಪಿಸಬಹುದು, ಅದರ ಮೌಲ್ಯವನ್ನು ಎತ್ತಿಹಿಡಿಯಬಹುದು. ಅಷ್ಟೇ ಅಲ್ಲದೆ, ವಿದ್ಯಾರ್ಥಿಗಳು ಅವರ ಪರಿಸರದ ಶ್ರೀಮಂತಿಕೆ ಹಾಗೂ ವೈವಿಧ್ಯತೆಗಳನ್ನು ನೋಡಿ ಪ್ರಚೋದಿತರಾಗಲು ನೆರವಾಗಬಹುದು. ಇನ್ನೂ ಹೆಚ್ಚಾಗಿ, ವಿದ್ಯಾರ್ಥಿಗಳ ಕಲಿಕೆ ಒಂದು ಸಮಗ್ರವಾಗಿ ಅಂದರೆ ಶಾಲೆಯ ಹೊರಗೆ ಮತ್ತು ಒಳಗೆ ಆಗುವ ಕಲಿಕೆ ಆಗುವ ನಿಟ್ಟಿನಲ್ಲಿ ಶ್ರಮಿಸಬೇಕು.

### ನಿಮ್ಮ ತರಗತಿ ಕೋಣೆಯನ್ನು ಇನ್ನೂ ಹೆಚ್ಚು ಆಕರ್ಷಣೀಯವಾಗಿಸುವುದು

ಜನರು ತಮ್ಮ ಮನೆಗಳನ್ನು ಎಷ್ಟು ಸಾಧ್ಯವೋ ಅಷ್ಟು ಆಕರ್ಷಣೀಯವಾಗಿ ಇಡಲು ಶ್ರಮಿಸುತ್ತಾರೆ. ನೀವು ನಿಮ್ಮ ವಿದ್ಯಾರ್ಥಿಗಳ ಕಲಿಕಾ ಪರಿಸರದ ಬಗ್ಗೆ ಆಲೋಚನೆ ಮಾಡುವುದು ಒಳ್ಳೆಯದು. ನೀವು ನಿಮ್ಮ ತರಗತಿ ಹಾಗೂ ಶಾಲೆಯಲ್ಲಿ ಕಲಿಕೆಯನ್ನುಂಟು ಮಾಡುವ ಒಂದು ಆಕರ್ಷಣೀಯ ಸ್ಥಳವನ್ನಾಗಿ ಮಾಡಲು ತೆಗೆದುಕೊಳ್ಳುವ ಶ್ರಮ ನಿಮ್ಮ ವಿದ್ಯಾರ್ಥಿಗಳ ಮೇಲೆ ಒಂದು ಧನಾತ್ಮಕ ಪ್ರಭಾವ ಬೀರುತ್ತದೆ. ನಿಮ್ಮ ತರಗತಿ

ಕೋಣೆಯನ್ನು ನಿಮ್ಮ ವಿದ್ಯಾರ್ಥಿಗಳ ಸಲುವಾಗಿ ಆಸಕ್ತಿದಾಯಕ ಹಾಗೂ ಆಕರ್ಷಣೀಯವಾಗಿಸಲು, ನೀವು ಹೆಚ್ಚಿನದ್ದನ್ನು ಮಾಡಬಹುದು. ಉದಾಹರಣೆಗೆ, ನೀವು

- ಹಳೆಯ ಮ್ಯಾಗಜೀನ್ ಮತ್ತು ಕರಪತ್ರ ಗಳಿಂದ ಭಿತ್ತಿಪತ್ರಗಳನ್ನು(posters) ಸಿದ್ಧಪಡಿಸಬಹುದು
- ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ವಸ್ತುಗಳು ಮತ್ತು ಕಲಾಕೃತಿಗಳನ್ನು ತರಬಹುದು
- ನಿಮ್ಮ ವಿದ್ಯಾರ್ಥಿಗಳು ಮಾಡಿದ ಕೆಲಸವನ್ನು ಪ್ರದರ್ಶಿಸಬಹುದು
- ನಿಮ್ಮ ವಿದ್ಯಾರ್ಥಿಗಳಲ್ಲಿ ಕುತೂಹಲವನ್ನುಂಟು ಮಾಡಲು ಹಾಗೂ ಹೊಸ ಕಲಿಕೆಯನ್ನು ಪ್ರೇರೇಪಿಸಲು ತರಗತಿ ಕೋಣೆಯಲ್ಲಿ ಪ್ರದರ್ಶಿಸಿರುವುದನ್ನು ಬದಲಾಯಿಸುತ್ತಿರಬಹುದು

## ಸ್ಥಳೀಯ ಪರಿಣಿತರನ್ನು ನಿಮ್ಮ ತರಗತಿಯಲ್ಲಿ ಬಳಸುವುದು

ಗಣಿತದಲ್ಲಿ ಹಣ ಅಥವಾ ಪರಿಮಾಣದ ಬಗ್ಗೆ ಕೆಲಸ ಮಾಡುತ್ತಿದ್ದರೆ, ಮಾರಾಟಗಾರರು ಅಥವಾ ದರ್ಜಿಯನ್ನು ಕರೆದು ತಮ್ಮ ವೃತ್ತಿಯಲ್ಲಿ ಅವರು ಗಣಿತವನ್ನು ಬಳಸುವ ರೀತಿಯನ್ನು ವಿದ್ಯಾರ್ಥಿಗಳಿಗೆ ವಿವರಿಸುವಂತೆ ವಿನಂತಿಸಿಕೊಳ್ಳಿ. ನೀವು ನಿಮ್ಮ ವಿದ್ಯಾರ್ಥಿಗಳಿಗೆ ಕಲೆಯಲ್ಲಿ ವಿವಿಧ ರಚನೆಗಳು ಹಾಗೂ ಆಕೃತಿಗಳನ್ನು ತಿಳಿಸಬೇಕಿದ್ದರೆ, ಮೆಹಂದಿ ಹಾಕುವ ಕಲೆಯಲ್ಲಿ ಪರಿಣಿತಿ ಹೊಂದಿರುವವರನ್ನು ನಿಮ್ಮ ಶಾಲೆಗೆ ಕರೆದು ವಿವಿಧ ಆಕೃತಿ, ವಿನ್ಯಾಸ, ಸಂಪ್ರದಾಯ ಮತ್ತು ತಂತ್ರಗಳನ್ನು ಅವರಿಂದ ತಿಳಿಯಬಹುದು. ಶೈಕ್ಷಣಿಕ ಗುರಿಗಳು ಎಲ್ಲರಿಗೂ ಸ್ಪಷ್ಟವೆನಿಸಿದಾಗ, ಹೀಗೆ ಅತಿಥಿಗಳನ್ನು ಆಹ್ವಾನಿಸಿ, ಕಾರ್ಯ ನಿರ್ವಹಿಸುವುದು ಉತ್ತಮವೆನಿಸುತ್ತದೆ. ಸಮಯಕ್ಕನುಗುಣವಾಗಿ ನಿರೀಕ್ಷೆಗಳ ಹಂಚಿಕೆಯೂ ಸಹ ಆಗುತ್ತದೆ.

ನಿಮ್ಮ ಶಾಲಾ ಸಮುದಾಯದಲ್ಲೇ ಕೆಲವು ಪರಿಣಿತರು (ಉದಾಹರಣೆಗೆ - ಅಡುಗೆ ಭಟ್ಟರು ಅಥವಾ ಯೋಗಕ್ಷೇಮ ನೋಡಿಕೊಳ್ಳುವವರು) ಇರಬಹುದು. ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಸಂಬಂಧಿಸಿದಂತೆ, ಇಂತಹ ಪರಿಣಿತರನ್ನು ಸಂದರ್ಶನ ಮಾಡಬಹುದು. ಉದಾಹರಣೆಗೆ, ಅಡುಗೆಯಲ್ಲಿ ಎಷ್ಟು ಪ್ರಮಾಣದ ಆಹಾರ ವಸ್ತುಗಳನ್ನು ಬಳಸಿ ವಿವಿಧ ಆಹಾರ ಪದಾರ್ಥಗಳನ್ನು ತಯಾರಿಸಲಾಗುತ್ತದೆ ಅಥವಾ ಹವಾಮಾನವು ಶಾಲಾ ಆಟದ ಮೈದಾನ ಮತ್ತು ಕಟ್ಟಡಗಳ ಮೇಲೆ ಯಾವ ರೀತಿ ಪ್ರಭಾವ ಬೀರುತ್ತದೆ.

## ಹೊರಗಿನ ಪರಿಸರವನ್ನು ಬಳಸುವುದು

ನಿಮ್ಮ ಪಾಠ ಬೋಧನೆಯಲ್ಲಿ ಬಳಸಬಹುದಾದಂತಹ ಅನೇಕ ಸಂಪನ್ಮೂಲಗಳು ನಿಮ್ಮ ತರಗತಿಯ ಹೊರಗಡೆ ಲಭ್ಯವಿರುತ್ತದೆ. ಎಲೆಗಳು, ಜೇಡಗಳು, ಸಸ್ಯಗಳು, ಕೀಟಗಳು, ಕಲ್ಲುಗಳು ಅಥವಾ ಮರದ ತುಂಡುಗಳಂತಹ ವಸ್ತುಗಳನ್ನು ನೀವು ಸಂಗ್ರಹಿಸಬಹುದು (ಅಥವಾ ನಿಮ್ಮ ತರಗತಿಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ತಿಳಿಸಿ) ಈ ಸಂಪನ್ಮೂಲಗಳನ್ನು ನಿಮ್ಮ ತರಗತಿಯ ಒಳಗೆ ಆಕರ್ಷಣೀಯವಾಗಿ ಪ್ರದರ್ಶಿಸುವುದರಿಂದ ನಿಮ್ಮ ಪಾಠ ಬೋಧನೆಯನ್ನು ಇನ್ನೂ ಆಸಕ್ತಿದಾಯಕವನ್ನಾಗಿಸಬಹುದು. ಈ ವಸ್ತುಗಳು ಚರ್ಚೆಗೆ ವಿಷಯವನ್ನು ಒದಗಿಸುತ್ತವೆ ಅಥವಾ ವರ್ಗೀಕರಣದ ಬಗ್ಗೆ ಚಟುವಟಿಕೆಗೆ ಬಳಕೆಯಾಗುತ್ತವೆ ಅಥವಾ ಜೀವಿಗಳು ಮತ್ತು ನಿರ್ಜೀವ ವಸ್ತುಗಳ ಬಗ್ಗೆ ಪ್ರಯೋಗಗಳ ಮೂಲಕ ವಿವರಿಸಲು ಸಹಾಯಕವಾಗುತ್ತವೆ. ನಿಮ್ಮ ಸ್ಥಳೀಯ ಸಮುದಾಯಕ್ಕೆ ಸಮರ್ಪಕವಾಗಿರುವಂತಹ ಮತ್ತು ಕೂಡಲೇ ಲಭ್ಯವಿರುವಂತಹ ಸಂಪನ್ಮೂಲಗಳಾದ ಬಸ್ ವೇಳಾ ಪಟ್ಟಿಗಳು ಅಥವಾ ಜಾಹೀರಾತುಗಳನ್ನು ಪದಗಳ ಗುರುತಿಸುವಿಕೆ, ಗುಣಾತ್ಮಕತೆಯನ್ನು ಹೋಲಿಸುವುದು ಅಥವಾ ಪ್ರಯಾಣದ ಸಮಯವನ್ನು ಲೆಕ್ಕ ಹಾಕುವುದಕ್ಕೆ ಕಲಿಕಾ ಸಂಪನ್ಮೂಲವಾಗಿ ಬಳಸಬಹುದಾಗಿದೆ.

ಹೊರಗಡೆಯಿಂದ ವಸ್ತುಗಳನ್ನು ತರಗತಿಯ ಒಳಗೆ ತರಬಹುದು. ಆದರೆ ಹೊರಾಂಗಣವೇ ವಿಸ್ತರಿಸಿದ ತರಗತಿಯಾಗಬಹುದು. ಎಲ್ಲಾ ವಿದ್ಯಾರ್ಥಿಗಳು ಸುಲಭವಾಗಿ ಚಟುವಟಿಕೆಗಳನ್ನು ನೋಡಲು, ಸಾಮಾನ್ಯವಾಗಿ ಹೊರಗಡೆ ಹೆಚ್ಚು ಸ್ಥಳಾವಕಾಶವಿರುತ್ತದೆ. ನಿಮ್ಮ ವಿದ್ಯಾರ್ಥಿಗಳನ್ನು ಕಲಿಕೆಗಾಗಿ ಹೊರಗಡೆ ಕರೆದುಕೊಂಡು ಹೋದಾಗ, ಅವರು ಈ ಕೆಳಕಂಡ ಚಟುವಟಿಕೆಗಳನ್ನು ಮಾಡಬಹುದು:

- ವೃತ್ತದ ಮೇಲಿರುವ ಪ್ರತಿಯೊಂದು ಬಿಂದುವೂ, ಕೇಂದ್ರ ಬಿಂದುವಿನಿಂದ ಸಮಾನ ದೂರದಲ್ಲಿರುತ್ತದೆ ಎಂಬುದನ್ನು ಪ್ರಾತ್ಯಕ್ಷಿಕೆಯ ಮೂಲಕ ಮಾಡಿ ತೋರಿಸುವುದು
- ಒಂದು ದಿನದ ವಿವಿಧ ಸಮಯಗಳಲ್ಲಿ ನೆರಳುಗಳ ಉದ್ದವನ್ನು ದಾಖಲಿಸಬಹುದು
- ಸೂಚನೆಗಳು ಹಾಗೂ ಚಿಹ್ನೆಗಳನ್ನು ಓದುವುದು
- ಸಮೀಕ್ಷೆಗಳು ಮತ್ತು ಸಂದರ್ಶನಗಳನ್ನು ಮಾಡುವುದು
- ಸೌರಚಾಲಿತ ಪ್ಯಾನೆಲ್ ಗಳನ್ನು ಒಂದು ಸ್ಥಳದಲ್ಲಿ ಸ್ಥಾಪಿಸುವುದು
- ಪೈರಿನ ಬೆಳವಣಿಗೆ ಮತ್ತು ಮಳೆ ಪ್ರಮಾಣವನ್ನು ನಿರ್ವಹಿಸುವುದು

ಹೊರಗಡೆ ವಾತಾವರಣದಲ್ಲಿ, ಅವರ ಕಲಿಕೆಯು ನೈಜತೆ ಮತ್ತು ಅವರದೇ ಆದ ಸ್ವತಃ ಅನುಭವಗಳ ಆಧಾರದ ಮೇಲೆ ಅವಲಂಬಿತವಾಗಿದೆ ಮತ್ತು ಇದನ್ನು ಇತರೆ ಸಂದರ್ಭಗಳಿಗೆ ವರ್ಗಾಯಿಸಬಹುದಾಗಿದೆ.

ನೀವು ಶಾಲಾ ಆವರಣದಿಂದ ಹೊರಗೆ ಹೋಗಿ ಕಾರ್ಯ ನಿರ್ವಹಿಸ ಬೇಕಿದ್ದರೆ, ನಿಮ್ಮ ಶಾಲೆಯ ನಾಯಕರ ಅನುಮತಿಯನ್ನು ತೆಗದುಕೊಳ್ಳುವ ಅವಶ್ಯಕತೆಯಿದೆ, ಯಾವ ಸಮಯದಲ್ಲಿ ಹೋಗಬೇಕು ಎಂದು ಮೊದಲೇ ಯೋಜಿಸಿಕೊಳ್ಳಬೇಕು ಮತ್ತು ವಿದ್ಯಾರ್ಥಿಗಳು ನಿಯಮಗಳನ್ನು ಸ್ಪಷ್ಟವಾಗಿ ತಿಳಿದಿರಬೇಕು. ನೀವು ಮತ್ತು ನಿಮ್ಮ ವಿದ್ಯಾರ್ಥಿಗಳು ಶಾಲಾ ಆವರಣದಿಂದ ಹೊರಗೆ ಹೋಗುವ ಮೊದಲು, ಏನನ್ನು ಕಲಿಯಬೇಕು ಎಂಬುದರ ಕುರಿತು ಸ್ಪಷ್ಟ ಅರಿವು ಇರಬೇಕು.

## ಸಂಪನ್ಮೂಲಗಳನ್ನು ಹೊಂದಿಸುವುದು/ಮಾರ್ಪಡಿಸುವುದು

ನಿಮ್ಮ ವಿದ್ಯಾರ್ಥಿಗಳಿಗೆ ಹೆಚ್ಚು ಸೂಕ್ತವಾಗಿರುವಂತೆ, ಈಗಿರುವ ಸಂಪನ್ಮೂಲಗಳನ್ನು ನೀವು ಮಾರ್ಪಡಿಸಬಹುದು/ಹೊಂದಿಸಬಹುದು. ಈ ಬದಲಾವಣೆಗಳು ಚಿಕ್ಕದೇ ಆಗಿದ್ದರೂ, ಹೆಚ್ಚಿನ ವ್ಯತ್ಯಾಸವನ್ನು ಮಾಡಬಲ್ಲವು. ವಿಶೇಷವಾಗಿ, ನೀವು ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಸರಿ ಹೊಂದುವಂತೆ ಕಲಿಕೆಯನ್ನುಂಟು ಮಾಡಲು ಪ್ರಯತ್ನಿಸುತ್ತಿದ್ದರೆ, ಇಂತಹ ಮಾರ್ಪಾಡುಗಳು ಹೆಚ್ಚಿನ ವ್ಯತ್ಯಾಸವನ್ನು ಮಾಡಬಲ್ಲವು. ಉದಾಹರಣೆಗೆ, ಬೇರೆ ರಾಜ್ಯಕ್ಕೆ ಸಂಬಂಧಿಸಿದವರಾಗಿದ್ದರೆ, ಸ್ಥಳದ ಹೆಸರು ಹಾಗೂ ವ್ಯಕ್ತಿಯ ಹೆಸರನ್ನು ಬದಲಾಯಿಸುವುದು ಅಥವಾ ಒಂದು ಹಾಡಿನಲ್ಲಿರುವ ವ್ಯಕ್ತಿಯನ್ನು ಬದಲಾಯಿಸುವುದು ಅಥವಾ ವಿಶೇಷ ಸಾಮರ್ಥ್ಯವುಳ್ಳ ಒಂದು ಮಗುವನ್ನು ಕಥೆಯಲ್ಲಿ ಪರಿಚಯಿಸುವುದು. ಹೀಗೆ ನೀವು ಸಂಪನ್ಮೂಲಗಳನ್ನು ನಿಮ್ಮ ತರಗತಿಯ ವಿದ್ಯಾರ್ಥಿಗಳಿಗೆ ಹಾಗೂ ಅವರ ಕಲಿಕೆಗೆ ಸೂಕ್ತವಾಗಿರುವಂತೆ ಸಿದ್ಧಪಡಿಸಬಹುದು.

ಇನ್ನೂ ಹೆಚ್ಚು ಸಂಪನ್ಮೂಲಭರಿತರಾಗಲು ನಿಮ್ಮ ಸಹೋದ್ಯೋಗಿಗಳ ಜೊತೆ ಕಾರ್ಯ ನಿರ್ವಹಿಸಿ. ನೀವು ಹಾಗೂ ನಿಮ್ಮ ಸಹೋದ್ಯೋಗಿಯ ನಡುವೆ ಇನ್ನೂ ಹೆಚ್ಚಿನ ಶ್ರೇಣಿಕೃತ ಕೌಶಲಗಳಿದ್ದು, ಇದು ಸಂಪನ್ಮೂಲಗಳ ಮಾರ್ಪಡಿಸುವಿಕೆ/ಹೊಂದಿಸುವಿಕೆ ಹಾಗೂ ಹೊಸ ಸಂಪನ್ಮೂಲಗಳ ಸಿದ್ಧಪಡಿಸುವಿಕೆಗೆ ಸಹಾಯ ಮಾಡುತ್ತದೆ. ನಿಮ್ಮ ಒಬ್ಬ ಸಹೋದ್ಯೋಗಿಗೆ ಸಂಗೀತದಲ್ಲಿ ಕೌಶಲವಿರಬಹುದು, ಇನ್ನೊಬ್ಬರಿಗೆ ಗೊಂಬೆಗಳನ್ನು ಸಿದ್ಧಪಡಿಸುವ ಬಗ್ಗೆ ಅಥವಾ ತರಗತಿಯ ಹೊರಗೆ ವಿಜ್ಞಾನ ಚಟುವಟಿಕೆಗಳನ್ನು ಆಯೋಜಿಸುವುದರ ಬಗ್ಗೆ ಉತ್ತಮ ಕೌಶಲಗಳನ್ನು ಹೊಂದಿರಬಹುದು. ನೀವು ನಿಮ್ಮ ತರಗತಿಯಲ್ಲಿ ಬಳಸುವ ಸಂಪನ್ಮೂಲಗಳನ್ನು ನಿಮ್ಮ ಸಹೋದ್ಯೋಗಿಗಳ ಜೊತೆ ಹಂಚಿಕೊಳ್ಳಿ. ಇದರಿಂದ ನಿಮ್ಮ ಶಾಲೆಯ ಎಲ್ಲಾ ಕ್ಷೇತ್ರಗಳಲ್ಲಿ ಕಲಿಕಾ ವಾತಾವರಣ ಶ್ರೀಮಂತವಾಗಲಿದೆ.

# ಸಂಪನ್ಮೂಲ 2: ಗುಂಪುಕೆಲಸ ಬಳಸುವುದು

ಗುಂಪುಕೆಲಸವನ್ನು ಒಂದು ಸಾಮಾನ್ಯ ಗುರಿ ಸಾಧನೆಗೆ ವಿದ್ಯಾರ್ಥಿಗಳು ಸಣ್ಣ ಗುಂಪುಗಳಲ್ಲಿ ಕೆಲಸ ಮಾಡುವುದನ್ನು ಉತ್ತೇಜಿಸುವ ವ್ಯವಸ್ಥಿತ, ಸಕ್ರಿಯ, ಶೈಕ್ಷಣಿಕ ಮಾರ್ಗೋಪಾಯ ಎಂದು ಹೇಳಬಹುದು. ವ್ಯವಸ್ಥಿತ ಚಟುವಟಿಕೆಗಳ ಮೂಲಕ ಕಲಿಕೆ ಹೆಚ್ಚು ಸಕ್ರಿಯ ಹಾಗೂ ಪರಿಣಾಮಕಾರಿಯಾಗುವುದಕ್ಕೆ ಸಣ್ಣ ಗುಂಪುಗಳು ಸಹಕಾರಿಯಾಗುತ್ತವೆ.

ಗುಂಪುಕೆಲಸದ ಪ್ರಯೋಜನಗಳು

ನಿಮ್ಮ ವಿದ್ಯಾರ್ಥಿಗಳನ್ನು ಚಿಂತನೆಗೆ, ಸಂವಹನಕ್ಕೆ, ವಿಚಾರಗಳ ವಿನಿಮಯಕ್ಕೆ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವುದನ್ನು ಪ್ರೇರೇಪಿಸುವುದಕ್ಕೆ ಗುಂಪುಕೆಲಸ ಬಹಳ ಪರಿಣಾಮಕಾರಿ ಮಾರ್ಗ. ನಿಮ್ಮ ವಿದ್ಯಾರ್ಥಿಗಳು ಬೇರೆಯವರಿಂದ ಕಲಿಯುತ್ತಾರೆ ಮತ್ತು ಕಲಿಸುತ್ತಾರೆ. ಇದು ಸಬಲ ಮತ್ತು ಸಕ್ರಿಯ ಕಲಿಕಾ ವಿಧಾನ.

ಬರೀ ಗುಂಪುಗಳಲ್ಲಿ ಕುಳಿತು ಮಾಡುವುದಕ್ಕಿಂತ ಹೆಚ್ಚಿನದೇನೋ ಗುಂಪು ಚಟುವಟಿಕೆಯಲ್ಲಿ ಇರುತ್ತದೆ. ಅದೇನೆಂದರೆ, ಒಂದು ಸ್ಪಷ್ಟ ಉದ್ದೇಶವಿರುವ ಹಂಚಿಕೊಂಡಿರುವ ಕಲಿಕಾ ಕ್ರಿಯೆಯಲ್ಲಿ (shared learning task) ತೊಡಗಿಕೊಂಡು, ಅದಕ್ಕೆ ಕೊಡುಗೆ ನೀಡುವುದು. ಕಲಿಕೆಗೆ ಏತಕ್ಕಾಗಿ ಗುಂಪು ಚಟುವಟಿಕೆಯನ್ನು ಬಳಸುತ್ತಿದ್ದೀರಿ ಎಂದು ನಿಮಗೆ ಸ್ಪಷ್ಟವಾಗಿ ತಿಳಿದಿರಬೇಕು ಹಾಗೂ ಭಾಷಣ ಬಿಗಿಯುವುದಕ್ಕಿಂತ ಇದು ಏಕೆ ಯೋಗ್ಯವಾದ್ದು ಎನ್ನುವುದು ಸಹ ನಿಮಗೆ ತಿಳಿದಿರಬೇಕು. ಅಂದರೆ ಗುಂಪು ಚಟುವಟಿಕೆಯನ್ನು ಜಾಗರೂಕತೆಯಿಂದ ಯೋಜಿಸಬೇಕು ಮತ್ತು ಇವುಗಳನ್ನು ಯಾವ ಕಲಿಕಾ ಉದ್ದೇಶಕ್ಕೆ ಬಳಸುತ್ತಿದ್ದೀವಿ ಎನ್ನುವುದರಲ್ಲಿ ಸ್ಪಷ್ಟತೆ ಇರಬೇಕು.

**ಗುಂಪುಕೆಲಸವನ್ನು ಯೋಜಿಸುವುದು**

ಯಾವಾಗ ಮತ್ತು ಯಾವ ರೀತಿಯಲ್ಲಿ ಗುಂಪುಕೆಲಸ ಬಳಸಬಹುದು ಎನ್ನುವುದು ಪಾಠದ ಕೊನೆಯ ವೇಳೆಗೆ ಆಗಬೇಕಾದ ಕಲಿಕೆಯನ್ನು ಆಧರಿಸಿರುತ್ತದೆ. ಗುಂಪುಕೆಲಸವನ್ನು ಪಾಟದ ಮೊದಲಿಗೆ, ಕೊನೆಗೆ ಅಥವಾ ಮಧ್ಯದಲ್ಲಿ ಯಾವಾಗಲಾದರೂ ಬಳಸಬಹುದು ಆದರೆ ಇದಕ್ಕೆ ಸಾಕಷ್ಟು ಸಮಯವನ್ನು ಕೊಡಬೇಕು. ನಿಮ್ಮ ವಿದ್ಯಾರ್ಥಿಗಳು ಪೂರ್ಣಗೊಳಿಸಬೇಕಾದ ಕೆಲಸ ಮತ್ತು ಗುಂಪುಗಳನ್ನು ಸಂಘಟಿಸುವ ಅತ್ಯುತ್ತಮ ಮಾರ್ಗ ಯಾವುದು ಎಂಬ ಅಂಶಗಳ ಕುರಿತಾಗಿ ನೀವು ಯೋಚನೆ ಮಾಡಬೇಕು.

ಮುಂಚಿತವಾಗಿಯೇ, ನೀವು ಯೋಜನೆಯನ್ನು ತಯಾರಿಸಿಕೊಂಡಿದ್ದರೆ, ಗುಂಪುಕೆಲಸ ಸಫಲವಾಗುವುದನ್ನು ಖಚಿತ ಪಡಿಸಿಕೊಳ್ಳಬಹುದು. ಆ ಯೋಜನೆಯಲ್ಲಿ ಕೆಳಗಿನ ಅಂಶಗಳಿರಬೇಕು

- ಗುಂಪು ಚಟುವಟಿಕೆಯ ಉದ್ದೇಶ ಮತ್ತು ನಿರೀಕ್ಷಿತ ಫಲಿತಗಳು
- ಚಟುವಟಿಕೆಗೆ ಮೀಸಲಾಗುವ ಸಮಯ; ಇದರಲ್ಲಿ ಹಿಮ್ಮಾಹಿತಿ ಅಥವಾ ಸಾರಾಂಶಿಸುವ ಸಮಯವೂ ಸೇರಿರಬೇಕು.
- ಗುಂಪುಗಳ ರಚನೆ (ಎಷ್ಟು ಗುಂಪುಗಳು, ಗುಂಪಿನಲ್ಲಿ ಎಷ್ಟು ವಿದ್ಯಾರ್ಥಿಗಳು, ಯಾವ ಆಧಾರದ ಮೇಲೆ ಗುಂಪುಗಳನ್ನು ರಚಿಸುವುದು)
- ಗುಂಪುಗಳ ಸಂಘಟನೆ (ಗುಂಪಿನ ಸದಸ್ಯರ ಪಾತ್ರ, ಸಮಯ, ಸಾಮಗ್ರಿಗಳು, ದಾಖಲು ಮಾಡುವುದು ಮತ್ತು ವರದಿ ತಯಾರಿಸುವುದು)
- ಮೌಲ್ಯಾಂಕನವನ್ನು ಮಾಡುವ ಮತ್ತು ದಾಖಲಿಸುವ ರೀತಿ (ವೈಯಕ್ತಿಕ ಮೌಲ್ಯಾಂಕನ ಮತ್ತು ಗುಂಪಿನ ಮೌಲ್ಯಾಂಕನಗಳ ನಡುವೆ ಇರುವ ವಿಭಿನ್ನತೆಯ ಕುರಿತು ಜಾಗರೂಕರಾಗಿರುವುದು ಮುಖ್ಯ)
- ಗುಂಪಿನ ಚಟುವಟಿಕೆಗಳ ಮೇಲ್ವಿಚಾರಣೆಯನ್ನು ಮಾಡುವ ರೀತಿ

ಗುಂಪುಕೆಲಸದ ಕಾರ್ಯಗಳು

ನೀವು ವಿದ್ಯಾರ್ಥಿಗಳಿಗೆ ಪೂರೈಸಲು ಕೊಡುವ ಕಾರ್ಯಗಳು, ನೀವು ಅವರಿಗೆ ಕಲಿಸಬೇಕಾದದ್ದನ್ನುಅವಲಂಬಿಸಿರುತ್ತದೆ. ಗುಂಪುಕೆಲಸದಲ್ಲಿ ಭಾಗವಹಿಸುವುದರಿಂದ, ಅವರಿಗೆ ಒಬ್ಬರು ಹೇಳಿದ್ದನ್ನು ಇನ್ನೊಬ್ಬರು ಕೇಳಿಸಿಕೊಳ್ಳುವ, ವಿಚಾರಗಳನ್ನು ವಿವರಿಸುವ ಮತ್ತು ಸಹಕರಿಸಿಕೊಂಡು ಕೆಲಸ ಮಾಡುವ ಕೌಶಲಗಳನ್ನು ಗಳಿಸಿಕೊಳ್ಳುತ್ತಾರೆ. ಆದರೆ, ಬೋಧಿಸುತ್ತಿರುವ ವಿಷಯವನ್ನು ಅವರು ಕಲಿಯುವುದೇ ಮುಖ್ಯ ಉದ್ದೇಶವಾಗಿರುತ್ತದೆ. ನೀವು ಕೊಡಬಹುದಾದ ಕಾರ್ಯಗಳ ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ:

- **ಪ್ರಸ್ತುತಿಗಳು:** ಗುಂಪುಗಳಲ್ಲಿ ಕೆಲಸ ಮಾಡಿ, ಇಡೀ ತರಗತಿಗೆ ಪ್ರಸ್ತುತಿಗಳನ್ನು (presentations) ಸಿದ್ಧಪಡಿಸುತ್ತಾರೆ. ಒಂದೇ ವಿಷಯ ಹಲವು ಸಲ ಕೇಳಿಸಿಕೊಳ್ಳುವುದಕ್ಕಿಂತ, ಪ್ರತೀ ಗುಂಪಿಗೂ ವಿಷಯದ ಬೇರೆ ಬೇರೆ ಶಾಖೆಗಳನ್ನುಕೊಡುವುದು ಉತ್ತಮ. ಆಗ ಎಲ್ಲರೂ ಇನ್ನೊಬ್ಬರು ಪ್ರಸ್ತುತ ಪಡಿಸುತ್ತಿರುವುದನ್ನು ಕೇಳಿಸಿಕೊಳ್ಳಲು ಪ್ರೇರಿಪಿತರಾಗಿರುತ್ತಾರೆ. ಆದರೆ ಪ್ರಸ್ತುತಿಗೆ ಇರುವ ಕಾಲ ಮಿತಿ ನಿರ್ದಿಷ್ಟವಾಗಿರಲಿ ಮತ್ತು ಒಳ್ಳೆಯ ಪ್ರಸ್ತುತಿಯ ಗುಣಲಕ್ಷಣಗಳು ಯಾವುವು ಎಂದು ನಿರ್ಧರಿಸಿ. ಇವುಗಳನ್ನು ಪಾಠಕ್ಕೆ ಮುಂಚಿತವಾಗಿಯೇ ಕಪ್ಪು ಹಲಗೆಯ ಮೇಲೆ ಬರೆಯಿರಿ. ಇದನ್ನು ಬಳಸಿ ಮಕ್ಕಳು ತಮ್ಮ ಪ್ರಸ್ತುತಿಯನ್ನು ಸಿದ್ಧಪಡಿಸಲಿ ಮತ್ತು ಸಹಪಾಠಿಗಳ ಕೆಲಸವನ್ನು ಮೌಲ್ಯಾಂಕನ ಮಾಡಲಿ. ಗುಣಲಕ್ಷಣಗಳು ಕೆಳಗಿನ ಅಂಶಗಳನ್ನು ಒಳಗೊಳ್ಳಬಹುದು:
    - ಪ್ರಸ್ತುತಿಯಲ್ಲಿ ಸ್ಪಷ್ಟತೆ ಇತ್ತೆ?
    - ಪ್ರಸ್ತುತಿಯ ರಚನೆ ಚನ್ನಾಗಿತ್ತೆ?
    - ಪ್ರಸ್ತುತಿಯಿಂದ ನನಗೆ ಏನಾದರೂ ಕಲಿಕೆಯಾಯಿತೆ?
    - ಪ್ರಸ್ತುತಿ ನನ್ನನ್ನು ಚಿಂತನೆಗೆ ಹಚ್ಚಿತೆ?
- **ಸಮಸ್ಯಾ ಪರಿಹಾರ**: ಒಂದು ಸಮಸ್ಯೆಯನ್ನು ಅಥವಾ ಸಮಸ್ಯಾ ಸರಣಿಗಳನ್ನು ಪರಿಹರಿಸಲು ವಿದ್ಯಾರ್ಥಿಗಳು ಗುಂಪುಗಳಲ್ಲಿ ಕೆಲಸ ಮಾಡುತ್ತಾರೆ. ಇದು ವಿಜ್ಞಾನದ ಪ್ರಯೋಗ ಮಾಡುವುದು, ಗಣಿತದ ಸಮಸ್ಯೆಗಳನ್ನು ಬಿಡಿಸುವುದು, ಕನ್ನಡದ ಕಥೆ ಅಥವಾ ಕವನವನ್ನು ವಿಶ್ಲೇಷಿಸುವುದು ಅಥವಾ ಚರಿತ್ರೆಯಲ್ಲಿ ಸಾಕ್ಷಾಧಾರಗಳನ್ನು ವಿಶ್ಲೇಷಿಸುವುದನ್ನು ಒಳಗೊಂಡಿರುತ್ತದೆ.
- **ಒಂದು ಕಲಾ ಕೃತಿಯನ್ನು ಅಥವಾ ಉತ್ಪನ್ನವನ್ನು ಸೃಜಿಸುವುದು**: ಮಾಹಿತಿಯನ್ನು ಸಾರಾಂಶಿಸಲು ಅಥವಾ ಒಂದು ಪರಿಕಲ್ಪನೆಯನ್ನು ವಿವರಿಸಲು ವಿದ್ಯಾರ್ಥಿಗಳು ಗುಂಪುಗಳಲ್ಲಿ ಕೆಲಸ ಮಾಡಿ ಒಂದು ಕಥೆ, ನಾಟಕ, ಸಂಗೀತ, ಮಾದರಿ ಹುಟ್ಟುಹಾಕುತ್ತಾರೆ. ಹೊಸ ವಿಷಯದ ಆರಂಭದಲ್ಲಿ ಐದು ನಿಮಿಷ ಮಸ್ತಿಷ್ಕ ಮಂಥನ (brainstorm) ಅಥವಾಮನೋ ನಕ್ಷೆ (mind map) ಮಾಡಲು

ಮೀಸಲಿಟ್ಟರೆ, ಅವರಿಗೇನು ತಿಳಿದಿದೆ ಎಂದು ನಿಮಗೆ ಚನ್ನಾಗಿ ಗೊತ್ತಾಗುತ್ತದೆ ಹಾಗೂ ನಿಮ್ಮ ಪಾಠವನ್ನು ಸೂಕ್ತ ಮಟ್ಟದಲ್ಲಿ ಮಾಡಲು ಸಹಾಯಕವಾಗುತ್ತದೆ.

- **ವಿಭೇದೀಕರಿಸಿದ ಕಾರ್ಯಗಳು** (Differentiated tasks):ಗುಂಪುಕಾರ್ಯ, ವಯೋಮಾನದಲ್ಲಿ ಅಥವಾ ಸಾಧನೆಯಲ್ಲಿ ವಿವಿಧ ಸ್ತರಗಳಲ್ಲಿರುವ ವಿದ್ಯಾರ್ಥಿಗಳು ಸೂಕ್ತವಾದ ಕಾರ್ಯದಲ್ಲಿ ಒಟ್ಟಾಗಿ ಕೆಲಸ ಮಾಡುವ ಅವಕಾಶವನ್ನು ನೀಡುತ್ತದೆ. ಹೆಚ್ಚು ಸಾಧಿಸಿರುವ ವಿದ್ಯಾರ್ಥಿಗಳಿಗೆ ವಿವರಿಸುವ ಅವಕಾಶ ದೊರೆಯುವುದು ಉಪಯುಕ್ತವಾದರೆ, ಸಾಧನೆಯಲ್ಲಿ ಹಿಂದುಳಿದವರಿಗೆ ಇಡೀ ತರಗತಿಯ ಬದಲಿಗೆ ಗುಂಪಿನಲ್ಲಿ ಪ್ರಶ್ನೆಗಳನ್ನು ಕೇಳುವುದು ಸುಲಭವಾಗುವುದು ಹಾಗೂ ಅವರು ತಮ್ಮ ಸಹಪಾಠಿಗಳಿಂದ ಕಲಿಯುವರು.
- **ಚರ್ಚೆ**:ಒಂದು ವಿದ್ಯಮಾನವನ್ನು ಕುರಿತು ವಿದ್ಯಾರ್ಥಿಗಳು ಜಾಗರೂಕರಾಗಿ ಚಿಂತಿಸಿ, ನಿರ್ಧಾರಕ್ಕೆ ಬರುವರು. ಒಂದು ವಿಷಯದ ಬಗ್ಗೆ ಇರುವ ವಿವಿಧ ಆಯ್ಕೆಗಳ ಕುರಿತು ಅವರಿಗೆ ಸಾಕಷ್ಟು ತಿಳಿದಿದೆ ಎಂದು ಖಚಿತಪಡಿಸಿಕೊಳ್ಳುವುದಕ್ಕೆ ನಿಮ್ಮ ಸಿದ್ಧತೆಯ ಆವಶ್ಯಕತೆ ಇರುತ್ತದೆ. ಆದರೂ ಚರ್ಚೆ ಅಥವಾ ಚರ್ಚಾ ಸ್ಪರ್ಧೆಯನ್ನು ಸಂಘಟಿಸುವುದು ನಿಮಗೆ ಹಾಗೂ ಅವರಿಗೆ ಬಹಳ ಲಾಭದಾಯಕವಾಗುತ್ತದೆ.

ಗುಂಪುಗಳನ್ನು ಸಂಘಟಿಸುವುದು

ಒಂದು ಗುಂಪಿನಲ್ಲಿ ನಾಲ್ಕರಿಂದ ಎಂಟು ವಿದ್ಯಾರ್ಥಿಗಳಿರುವುದು ಉತ್ತಮವಾದರೂ ನಿಮ್ಮ ತರಗತಿಯ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ, ತರಗತಿಯ ಭೌತಿಕ ಪರಿಸರ ಮತ್ತು ಪೀಠೋಪಕರಣ, ವಿದ್ಯಾರ್ಥಿಗಳ ವಯಸ್ಸಿನ ಹಾಗೂ ಸಾಧನೆಯ ಹರವುಗಳ ಮೇರೆಗೆ ಗುಂಪಿನ ಸಂಖ್ಯೆ ನಿರ್ಧಾರವಾಗುತ್ತದೆ. ಕನಿಷ್ಠ ಪಕ್ಷ ಎಲ್ಲರೂ ಒಬ್ಬರನ್ನೊಬ್ಬರು ನೋಡುವಂತಿರಬೇಕು, ಕಿರುಚದೆ ಮಾತನಾಡುವಂತಿರಬೇಕು ಮತ್ತು ಗುಂಪಿನಿಂದ ಹೊರಬರುವ ಉತ್ಪನ್ನಕ್ಕೆ ಕೊಡುಗೆ ನೀಡುವಂತಿರಬೇಕು.

- ನೀವು ಹೇಗೆ ಮತ್ತು ಏಕೆ ಗುಂಪುಗಳನ್ನು ರಚಿಸುತ್ತಿರುವಿರಿ ಎಂದು ನಿರ್ಧರಿಸಿ; ಉದಾಹರಣೆಗೆ, ಸ್ನೇಹಿತರೆಲ್ಲ ಒಂದು ಗುಂಪಿನಲ್ಲಿರುವಂತೆ, ಒಂದೇ ಆಸಕ್ತಿ ಇರುವವರೆಲ್ಲ ಒಂದು ಗುಂಪಿನಲ್ಲಿರುವಂತೆ ಅಥವಾ ಸಮಾನ ಸಾಧನೆಯ ಮಟ್ಟವಿರುವವರೆಲ್ಲ ಒಂದು ಗುಂಪಿನಲ್ಲಿರಬಹುದು. ಬೇರೆ ಬೇರೆ ರೀತಿಯ ಗುಂಪುಗಳ ರಚನೆಯನ್ನು ಪ್ರಯೋಗ ಮಾಡಿ ಹಾಗೂನಿಮ್ಮ ತರಗತಿಗೆ ಮತ್ತು ನೀವು ಕೊಡುತ್ತಿರುವ ಕಾರ್ಯಕ್ಕೆ ಯಾವುದು ಉತ್ತಮ ಎಂದು ನಿರ್ಧರಿಸಿ.
- ಗುಂಪಿನ ಸದಸ್ಯರಿಗೆ ಯಾವುದಾದರೂ ಕೆಲಸ ವಹಿಸುವುದಿದ್ದರೆ (ಉದಾಹರಣೆಗೆ - ನೋಟ್ಸ್ ಮಾಡಿಕೊಳ್ಳುವವರು, ವಕ್ತಾರ, ಸಮಯ ಪಾಲಕ, ಉಪಕರಣಗಳನ್ನು ಸಂಗ್ರಹಿಸುವವರು ಇತ್ಯಾದಿ) ಅದು ಮತ್ತು ಅದನ್ನು ಹೇಗೆ ಅವರಿಗೆ ತಿಳಿಸುವಿರಿ ಎನ್ನುವುದನ್ನು ಮೊದಲೇ ಯೋಜನೆ ಮಾಡಿಕೊಂಡಿರುವುದು ಒಳ್ಳೆಯದು.

ಗುಂಪುಕೆಲಸವನ್ನು ನಿರ್ವಹಿಸುವುದು

ಒಳ್ಳೆಯ ಗುಂಪುಕೆಲಸ ನಿರ್ವಹಣೆಗೆ ಕೆಲವು ನಿಯಮಗಳು ಮತ್ತು ವಾಡಿಕೆಗಳನ್ನು (routine) ನಿಗದಿಸಬಹುದು. ಪದೇ ಪದೇ ಗುಂಪುಕೆಲಸವನ್ನು ಬಳಸುತ್ತಿದ್ದರೆ ಮಕ್ಕಳಿಗೆ ನಿಮ್ಮ ನಿರೀಕ್ಷೆ ಮತ್ತು ಯಾವುದರಿಂದ ನಿಮಗೆ ಖುಷಿಯಾಗುತ್ತದೆ ಎನ್ನುವುದು ತಿಳಿಯುತ್ತದೆ. ಮೊದಲಿಗೆ ಗುಂಪುಗಳಲ್ಲಿ ಕೆಲಸ ಮಾಡುವುದರಿಂದ ಆಗುವ ಉಪಯೋಗಗಳನ್ನು ಎಲ್ಲರೂ ಸೇರಿ ಗುರುತಿಸುವುದು ಒಳ್ಳೆಯದು.ಗುಂಪುಕೆಲಸ ಮಾಡುವಾಗ ಒಳ್ಳೆಯ ವರ್ತನೆ ಯಾವುದೆಂದು ಚರ್ಚಿಸಿ, ಈ ವರ್ತನೆಗಳ ಪಟ್ಟಿಯೊಂದನ್ನು ತಯಾರಿಸಬಹುದು. ಉದಾಹರಣೆಗೆ:ಪರಸ್ಪರ ಗೌರವ, ಆಲಿಸುವುದು, ಪರಸ್ಪರ ಸಹಾಯ, ಒಂದಕ್ಕಿಂತ ಹೆಚ್ಚು ವಿಚಾರಗಳನ್ನು ಪರಿಗಣಿಸುವುದು ಇತ್ಯಾದಿ. ಇದನ್ನು ತರಗತಿಯಲ್ಲಿ ಎಲ್ಲರಿಗೂ ಕಾಣುವಂತೆ ಅಂಟಿಸಬಹುದು/ತೂಗು ಹಾಕಬಹುದು.

ಗುಂಪುಕೆಲಸದ ಬಗ್ಗೆ ಸ್ಪಷ್ಟ ಮೌಖಿಕ ಸೂಚನೆಗಳನ್ನು ಕೊಡುವುದು ಸಹ ಬಹಳ ಮುಖ್ಯ. ಇದನ್ನೇ ವಿದ್ಯಾರ್ಥಿಗಳ ಸಲುವಾಗಿ ಕಪ್ಪು ಹಲಗೆಯ ಮೇಲೆ ಬರೆಯಬಹುದು. ನೀವು ಅಗತ್ಯವಾಗಿ ಕೆಳಗಿರುವುದನ್ನು ಮಾಡಬೇಕಾಗುತ್ತದೆ:

- ನಿಮ್ಮಯೋಜನೆಗೆ ಅನುಗುಣವಾಗಿ ವಿದ್ಯಾರ್ಥಿಗಳು ಯಾವ ಗುಂಪಿನಲ್ಲಿರಬೇಕು, ತರಗತಿಯಲ್ಲಿ ಎಲ್ಲಿ ಅವರು ಕೆಲಸ ಮಾಡುತ್ತಾರೆ ಮತ್ತು ಅದಕ್ಕೆ ಪೀಠೋಪಕರಣಗಳ ಅಥವಾ ಅವರ ಬ್ಯಾಗ್ ಗಳ ಜಾಗವನ್ನು ಬದಲಿಸಬೇಕೆ ಎನ್ನುವುದನ್ನು ನಿರ್ದೇಶಿಸಿ
- ಅವರು ಮಾಡಬೇಕಾಗಿರುವ ಕಾರ್ಯದ ಬಗ್ಗೆ ಸ್ಪಷ್ಟತೆ ಇರಲಿ
- ಮತ್ತು ಅದನ್ನು ಸರಳ ಸಣ್ಣ ವಾಕ್ಯಗಳು ಅಥವಾ ಚಿತ್ರಗಳನ್ನು ಕಪ್ಪುಹಲಗೆಯ ಮೇಲೆ ಬರೆಯಿರಿ. ನೀವು ಪ್ರಾರಂಭಿಸುವ ಮುಂಚೆ ಪ್ರಶ್ನೆಗಳಿಗೆ ಅವಕಾಶವಿರಲಿ.

ಗುಂಪುಗಳಲ್ಲಿ ಕೆಲಸ ಮಾಡುವಾಗ, ಎಲ್ಲರನ್ನೂ ಗಮನಿಸಲು ತರಗತಿಯಲ್ಲಿ ಓಡಾಡುತ್ತಿರಿ ಮತ್ತು ಗುಂಪುಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂದು ಪರಿಶೀಲಿಸಿ. ಅವರು ಒಂದು ಕಡೆ ಮುಂದೆ ಹೋಗಲಾರದಂತೆ ಸಿಕ್ಕಿ ಹಾಕಿಕೊಂಡಿದ್ದರೆ ಅಥವಾ ಕೊಟ್ಟ ಕೆಲಸದಿಂದ ಭಿನ್ನವಾದ ದಿಕ್ಕಿನಲ್ಲಿ ಹೋಗುತ್ತಿದ್ದರೆ, ಅವರಿಗೆ ನಿಮ್ಮ ಸಲಹೆ ಕೊಡಿ.

ಕೆಲಸ ಮಾಡುತ್ತಿರುವಾಗಲೇ ಗುಂಪುಗಳನ್ನು ಬದಲಾಯಿಸಬೇಕು ಎಂದು ನಿಮಗೆ ಅನ್ನಿಸಬಹುದು. ಗುಂಪುಕೆಲಸ ಚನ್ನಾಗಿದೆ ಎನ್ನುವ ವಿಶ್ವಾಸ ನಿಮ್ಮಲ್ಲಿ ಮೂಡಲು ಎರಡು ತಂತ್ರಗಳನ್ನು ಬಳಸಬಹುದು - ಸಂಖ್ಯೆ ಹೆಚ್ಚಿರುವ ತರಗತಿಯನ್ನು ನಿರ್ವಹಿಸಲು ಇದು ಬಹಳ ಉಪಯುಕ್ತವಾದದ್ದು:

- **ತಜ್ಞರ ತಂಡಗಳು**: ಪ್ರತೀ ಗುಂಪೂ ಬೇರೆ ಬೇರ ಕಾರ್ಯದಲ್ಲಿ ನಿರತರಾಗಬೇಕು, ಉದಾಹರಣೆಗೆ ವಿದ್ಯುತ್ ಶಕ್ತಿ ಉತ್ಪಾದನೆಯ ಒಂದು ವಿಧಾನ ಅಥವಾ ಒಂದು ನಾಟಕದಲ್ಲಿರುವ ಒಂದು ಪಾತ್ರವನ್ನು ಬೆಳೆಸುವುದು. ಸ್ವಲ್ಪ ಸಮಯದ ನಂತರ ಗುಂಪುಗಳ ಪುನರ್ ರಚನೆ ಯಾಗಬೇಕು. ಈ ಪುನರಾಚನೆಯಾದ ಗುಂಪುಗಳಲ್ಲಿ, ಹಿಂದಿನ ಗುಂಪುಗಳಿಂದ ಬಂದ ಪ್ರತೀ ಗುಂಪಿನ ತಜ್ಞನೊಬ್ಬ/ಳು ಇರುತ್ತಾರೆ. ಈಗ ಅವರು ತಮ್ಮೊಂದಿಗೆ ತಂದ ಜ್ಞಾನವನ್ನು ಹಂಚಿಕೊಂಡು, ಎಲ್ಲವನ್ನು ಒಟ್ಟು ಸೇರಿಸಿ ಕ್ರೋಢೀಕರಣ ಮಾಡಬೇಕು. ಉದಾಹರಣೆಗೆ, ಯಾವ ರೀತಿಯ ವಿದ್ಯುತ್ ಸ್ಥಾವರವನ್ನು ಕಟ್ಟುವುದು ಅಥವಾ ನಾಟಕದ ತುಣುಕೊಂದನ್ನು ಕಟ್ಟುವುದು.
- **'ಹರಿಕಾರರು'**:ನೀವು ಕೊಟ್ಟಿರುವ ಕಾರ್ಯ ಸೃಜನಾತ್ಮಕ ಅಥವಾ ಸಮಸ್ಯಾ ಪರಿಹಾರ ಸ್ವರೂಪದ್ದು ಆಗಿದ್ದರೆ, ಪ್ರತೀ ಗುಂಪಿನಿಂದಲೂ ಒಬ್ಬ ಸದಸ್ಯಳನ್ನು/ನನ್ನು ಹರಿಕಾರರಳಾಗಿ/ನ್ನಾಗಿ ಇನ್ನೊಂದು ಗುಂಪಿಗೆ ಕಳಿಸಿ. ಅವರು ತಮ್ಮ ವಿಚಾರಗಳನ್ನು ಅಥವಾ ಪರಿಹಾರಗಳನ್ನು ಹೋಲಿಸಿ, ತಮ್ಮ ಗುಂಪಿಗೆ ವರದಿ ಒಪ್ಪಿಸಬೇಕು. ಈ ರೀತಿಯಲ್ಲಿ ಒಬ್ಬರು ಇನ್ನೊಬ್ಬರಿಂದ ಕಲಿಯಬಹುದು.

ಕಾರ್ಯದ ಕೊನೆಯಲ್ಲಿ, ಕಲಿಕೆಯನ್ನು ಸಾರಾಂಶಿಸಿ ಹಾಗೂ ಏನನ್ನಾದರೂ ತಪ್ಪಾಗಿ ಅರ್ಥೈಸಿಕೊಳ್ಳುತ್ತಿರುವುದನ್ನು ನೀವು ಗಮನಿಸಿದ್ದರೆ, ಅದನ್ನು ಸರಿಪಡಿಸಿ. ಪ್ರತೀ ಗುಂಪಿನಿಂದಲೂ ಹಿಮ್ಮಾಹಿತಿ ಪಡೆಯಬಹುದು, ಅಥವಾ ಒಳ್ಳೆಯ ವಿಚಾರಗಳಿರುವ ಗುಂಪನ್ನು ನೀವು ಗುರುತಿಸಿದ್ದರೆ, ಬರೀ ಅವರು ಮಾತ್ರ ಹಂಚಿಕೊಳ್ಳಬಹುದು. ವಿದ್ಯಾರ್ಥಿಗಳ ವರದಿ ಸಂಕ್ಷಿಪ್ತವಾಗಿರಲಿ ಹಾಗೂ ಅವರು ಇತರ ಗುಂಪುಗಳ ಕೆಲಸವನ್ನು ಗಮನಿಸಿ ಏನು ಚನ್ನಾಗಿತ್ತು, ಆಸಕ್ತಿ ಹುಟ್ಟಿಸಿದ್ದು ಏನು ಮತ್ತು ಯಾವುದನ್ನು ಇನ್ನೂ ಚನ್ನಾಗಿ ಮಾಡಬಹುದಿತ್ತು ಎನ್ನುವ ಹಿಮ್ಮಾಹಿತಿ ಕೊಡುವುದನ್ನು ಪ್ರೋತ್ಸಾಹಿಸಿ.

ನಿಮ್ಮ ತರಗತಿಯಲ್ಲಿಗುಂಪುಕೆಲಸವನ್ನುಅಳವಡಿಸಿಕೊಳ್ಳಲು ಪ್ರಯತ್ನಿಸಿದಾಗ,ಕೆಲವು ಸಲ ಅದನ್ನು ಕಾರ್ಯರೂಪಕ್ಕೆ ತರಲು ಕಷ್ಟವಾಗಬಹುದು. ಏಕೆಂದರೆ ಕೆಲವು ವಿದ್ಯಾರ್ಥಿಗಳು:

- ಸಕ್ರಿಯ ಕಲಿಕೆಯನ್ನು ಪ್ರತಿರೋಧಿಸುತ್ತಾರೆ ಮತ್ತು ತೊಡಗಿಕೊಳ್ಳುವುದಿಲ್ಲ
- ತಮ್ಮದೇ ಪ್ರಭಾವ ನಡೆಯಬೇಕೆನ್ನುವ (dominant) ಸ್ವಭಾವದವರಾಗಿರುತ್ತಾರೆ
- ವ್ಯಕ್ತಿಗಳ ನಡುವಣ ಸಂಬಂಧಗಳ ಕೌಶಲಗಳ ಕೊರತೆಯಿಂದ ಅಥವಾ ಆತ್ಮವಿಶ್ವಾಸದ ಕೊರತೆಯಿಂದಾಗಿ ಭಾಗವಹಿಸುವುದಿಲ್ಲ

ಗುಂಪುಕೆಲಸವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮೇಲಿನ ಅಂಶಗಳ ಕುರಿತಾಗಿ ಚಿಂತಿಸುವುದು ಬಹಳ ಮುಖ್ಯ. ಇದರೊಂದಿಗೆ, ಕಲಿಕಾ ಉದ್ದೇಶಗಳು ಪೂರೈಸಿತೇ ಮತ್ತು ನಿಮ್ಮ ವಿದ್ಯಾರ್ಥಿಗಳು ಯಾವರೀತಿ ಸ್ಪಂದಿಸಿದರು (ಎಲ್ಲರಿಗೂ ಇದು ಫಲಪ್ರದವಾಗಿತ್ತೇ) ಎನ್ನುವುದನ್ನು ಕುರಿತಿ ಚಿಂತಿಸಬೇಕು. ನಂತರ ಗುಂಪು ಕಾರ್ಯದಲ್ಲಿ, ಸಂಪನ್ಮೂಲಗಳಲ್ಲಿ, ಸಮಯದಲ್ಲಿ ಅಥವಾ ಗುಂಪು ರಚನೆಯಲ್ಲಿ ಯಾವ ರೀತಿಯ ಹೊಂದಾಣಿಕೆಗಳನ್ನು ಮಾಡಬೇಕು ಎಂದು ಜಾಗರೂಕತೆಯಿಂದ ಯೋಜಿಸಬೇಕು.

ವಿದ್ಯಾರ್ಥಿಗಳ ಸಾಧನೆಯ ಮೇಲೆ ಧನಾತ್ಮಕ ಪರಿಣಾಮವಿರಲು ಗುಂಪಿನಲ್ಲಿ ಕಲಿಯುವುದನ್ನು ಸದಾಕಾಲವೂ ಬಳಸಬೇಕಿಲ್ಲ ಎಂದು ಸಂಶೋಧನೆಗಳು ತಿಳಿಸುತ್ತವೆ. ಆದ್ದರಿಂದ ಪ್ರತೀ ಪಾಠಕ್ಕೂ ಇದನ್ನು ಬಳಸಲೇಬೇಕೆಂಬ ನಿರ್ಬಂಧವೇನೂ ಇಲ್ಲ. ಗುಂಪು ಕೆಲಸವನ್ನು ಪೂರಕ ಚಟುವಟಿಕೆಯನ್ನಾಗಿ ಬಳಸಬಹುದು. ಉದಾಹರಣೆಗೆ ವಿಷಯವಸ್ತು ಬದಲಾದಾಗ ಅಥವಾ ಒಂದು ತರಗತಿ ಚರ್ಚೆಯನ್ನು ಹುಟ್ಟುಹಾಕಲು ಇದನ್ನು ಬಳಸಬಹುದು, ತರಗತಿಯ ಸನ್ನಿವೇಶವನ್ನು ತಿಳಿಯಾಗಿಸಲು ಅಥವಾ ಅನುಭವಾತ್ಮಕ ಕಲಿಕಾ ಚಟುವಟಿಕೆಗಳನ್ನು ಪರಿಚಯಿಸಲು ಮತ್ತು ತರಗತಿಯಲ್ಲಿ ಸಮಸ್ಯಾ ಪರಿಹಾರದ ಅಭ್ಯಾಸ ನೀಡಲು ಅಥವಾ ವಿಷಯಗಳನ್ನು ಪುನರಾವಲೋಕನ ಮಾಡಲು ಸಹ ಗುಂಪುಕಾರ್ಯವನ್ನು ಬಳಸಬಹುದು.

## ಸಂಪನ್ಮೂಲ 3: ಹೊರಾಂಗಣ ಚಟುವಟಿಕೆಗಳಿಗಾಗಿ ಕೆಲವು ವಿಚಾರಗಳು

***ಕೋಷ್ಟಕ R4.1** ಹೊರಾಂಗಣ ಚಟುವಟಿಕೆಗಳಿಗಾಗಿ ಕೆಲವು ವಿಚಾರಗಳು*

| ಮಾನವರು | ವಸ್ತುಗಳು | ಭೌತಿಕ ಪ್ರಕ್ರಿಯೆಗಳು |
|---|---|---|
| **ಹೃದಯ ಬಡಿತ:** ಓಟದ ಪಂದ್ಯಕ್ಕಿಂತ ಮೊದಲು ಹಾಗೂ ನಂತರ ಹೃದಯ ಬಡಿತದ ಗತಿಯನ್ನು ಅನ್ವೇಷಿಸಿರಿ.<br><br>ನಾವು ವ್ಯಾಯಾಮ ಮಾಡಿದಾಗ ನಮ್ಮ ಹೃದಯ ಬಡಿತ ಏಕೆ ಹೆಚ್ಚಾಗುತ್ತದೆ?<br><br>ಯಾವುದು ಅದನ್ನು ನಿಧಾನವಾಗಿ ಮಾಡುವುದು?<br><br>ವ್ಯಾಯಾಮಕ್ಕಿಂತ ಮೊದಲು ಹಾಗೂ ನಂತರ ವಿದ್ಯಾರ್ಥಿಗಳ ಹೃದಯ ಬಡಿತವನ್ನು ದಾಖಲಿಸಿರಿ ಮತ್ತು ಅಂಕಿಅಂಶಗಳ ಆಲೇಖವನ್ನು ರಚಿಸಿರಿ. ಇದರಿಂದ ನೀವು ತರಗತಿಯ ವಿದ್ಯಾರ್ಥಿಗಳಿಗೆ ಇದನ್ನು ಹೋಲಿಕೆ ಮಾಡಬಹುದು. | **ವಸ್ತುಗಳನ್ನು ಕಂಡುಕೊಳ್ಳುವುದು:** ಶಾಲೆಯ ಸುತ್ತಮುತ್ತಲೂ ವಸ್ತುಗಳನ್ನು ಹುಡುಕಿರಿ, ಸಿಕ್ಕ ವಸ್ತುಗಳ ಹೆಸರುಗಳನ್ನು ದಾಖಲಿಸಿರಿ.<br><br>ಸಿಕ್ಕ ವಸ್ತು ಯಾವುದು ಎಂದು ವಿದ್ಯಾರ್ಥಿಗಳು ಹೇಗೆ ಹೇಳುವರು?<br><br>ಇವುಗಳ ಲಕ್ಷಣಗಳೇನು?<br><br>ಇದನ್ನು ಯಾವುದಕ್ಕಾಗಿ ಬಳಸಬಹುದು?<br><br>ಈ ವಸ್ತುಗಳು ಯಾವುದೇ ಸಮಯದಲ್ಲಾದರೂ ಬದಲಾಗುವುದೇ? | **ಗಾಳಿಪಟವನ್ನು ವಿನ್ಯಾಸಗೊಳಿಸಿ ಮತ್ತು ಮಾಡಿರಿ:** ಅತ್ಯುತ್ತಮ ಆಕಾರದ ಗಾಳಿಪಟ ಮಾಡಲು, ಬಳಸಲು ಉತ್ತಮವಾದ ವಸ್ತುಗಳನ್ನು ಅನ್ವೇಷಿಸಿ.<br><br>ಗಾಳಿಪಟ ಬಾಲವಿಲ್ಲದೆ ಹಾರಾಡಬಹುದೇ?<br><br>ಗಾಳಿಪಟ ಹೇಗೆ ಹಾರಾಡುತ್ತದೆ?<br><br>ಅದನ್ನು ಗಾಳಿಯ ಸಮ್ಮುಖದಲ್ಲಿ ಹೇಗೆ ಹಾರಾಡುವಂತೆ ಮಾಡುವುದು? |
| **ಉದ್ದ ಜಿಗಿತ:** ಉತ್ತಮ ಉದ್ದ ಜಿಗಿತ ಗಾರರಾಗಲು ಏನು ಮಾಡಬೇಕು?<br><br>ಒಬ್ಬ ವ್ಯಕ್ತಿ ಜಿಗಿಯುವ ದೂರ ಮತ್ತು ಅವರ ಕಾಲಿನ (femur) ಉದ್ದ - ಇವುಗಳ ನಡುವೆ ಏನಾದರೂ ಸಂಬಂಧವಿದೆಯೇ? ಅಥವಾ ಇತರ ಕೆಲವು ಗುಣಲಕ್ಷಣಗಳಿವೆಯೇ? | **ಮಣ್ಣನ್ನು ಪರೀಕ್ಷಿಸುವುದು:** ಸ್ಥಳೀಯ ಪ್ರದೇಶಗಳಿಂದ ವಿವಿಧ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿರಿ.<br><br>ನಿಮ್ಮಲ್ಲಿ ಭೂತಗನ್ನಡಿಗಳಿದ್ದರೆ, ಅವುಗಳ ಸಾಮ್ಯತೆಗಳನ್ನು ಮತ್ತು ವ್ಯತ್ಯಾಸಗಳನ್ನು ವೀಕ್ಷಿಸಲು ಬಳಸಿರಿ.<br><br>ಮಣ್ಣಿನ ವಿಧವನ್ನು ಗುರುತಿಸಲು ಮೂಲ ವರ್ಗೀಕರಣದ ವಿಧಾನವನ್ನು ಉಪಯೋಗಿಸಿ. ಮಣ್ಣನ್ನು ಜರಡಿ ಹಿಡಿಯಿರಿ ಮತ್ತು ವಿವಿಧ ಕಣಗಳನ್ನು ಗುರುತಿಸಿ. | **ಬಲವನ್ನು ಪರಿಶೋಧಿಸುವುದು:** ಬಾಗಿಲನ್ನು ಮುಚ್ಚುತ್ತಿರುವಾಗ ಮತ್ತು ತೆಗೆಯುತ್ತಿರುವಾಗ, ಅಥವಾ ಉಪಕರಣವಿದ್ದು ಅಥವಾ ಇಲ್ಲದೇ ಆಟದ ಮೈದಾನದಲ್ಲಿ ಆಡುತ್ತಿರುವವಾಗ ಯಾವ ಬಲವನ್ನು ಬಳಸುವಿರಿ?<br><br>ಅಲ್ಲಿ ಬಳಸುವ ಬಲಗಳನ್ನು ಚಿತ್ರಿಸಿರಿ. |

| ಮಾನವರು | ವಸ್ತುಗಳು | ಭೌತಿಕ ಪ್ರಕ್ರಿಯೆಗಳು |
|---|---|---|
| **ಸ್ನಾಯುಗಳು ಮತ್ತು ಕೀಲುಗಳು:** ಸ್ನಾಯುಗಳು ಮತ್ತು ಕೀಲುಗಳು ಕೆಲಸ ಮಾಡುವ ರೀತಿಯನ್ನು ಪರಿಶೋಧಿಸಲು ಆಟದ ಮೈದಾನದಲ್ಲಿ ಆಡುವ ಆಟಗಳನ್ನು ಬಳಸಿರಿ.<br>ಅವರ ಸಹವರ್ತಿಯು ಓಡುವಾಗ, ಜಿಗಿದಾಗ ಅಥವಾ ಚೆಂಡನ್ನು ಹಿಡಿಯುವಾಗ ಅವರ ಸ್ನಾಯುಗಳು ಮತ್ತು ಕೀಲುಗಳಿಗೆ ಏನಾಗುತ್ತಿದೆ ಎಂಬುದನ್ನು ವಿವರಿಸಲು ವಿದ್ಯಾರ್ಥಿಗಳಿಗೆ ಹೇಳಿರಿ. | **ನೈಸರ್ಗಿಕ ಮತ್ತು ಮಾನವ ನಿರ್ಮಿತ ವಸ್ತುಗಳು:** ಶಾಲೆಯಲ್ಲಿರುವ ನೈಸರ್ಗಿಕ ಮತ್ತು ಮಾನವ ನಿರ್ಮಿತ ವಸ್ತುಗಳನ್ನು ಪರಿಶೋಧಿಸಿ. ಅವುಗಳ ಗುಣಲಕ್ಷಣಗಳೇನು? ಅವುಗಳು ಮಳೆ ಅಥವಾ ಸೂರ್ಯನ ಬೆಳಕಿಗೆ ತಂದಾಗ ಅಥವಾ ಯಾವುದೇ ಸಮಯದಲ್ಲಾದರೂ ಬದಲಾಗುವಂತೆ ಕಾಣುತ್ತವೆಯೇ? | **ಶಕ್ತಿಯ ವರ್ಗಾವಣೆ:** ಸೂರ್ಯನ ಬೆಳಕಿನಲ್ಲಿ ಒಂದು ಸಸ್ಯ, ಬಣ್ಣದ ಕಾಗದದ ತುಂಡು, ಒಂದು ಕಪ್ ನೀರು, ಒಂದು ವಾರದವರೆಗೆ ಇಟ್ಟಾಗ ವಾರದ ನಂತರ ಏನಾಗಬಹುದು ಎಂಬುದನ್ನು ಅನ್ವೇಷಿಸಿ. ಯಾವುದೇ ಸಮಯದಲ್ಲಾದರೂ ಅನ್ವೇಷಣೆಗಳನ್ನು ಮಾಡಿ ಮತ್ತು ಮಾಹಿತಿಯನ್ನು ದಾಖಲಿಸಿ.<br>ರಾತ್ರಿ ವೇಳೆಯಲ್ಲಿ ಅಥವಾ ಮೋಡಗಳಿಂದ ಸೂರ್ಯನು ಮುಚ್ಚಿಕೊಂಡಾಗ ಏನಾಗಬಹುದು? |
| **ಆಹಾರ ಪದಾರ್ಥವನ್ನು ಹುಡುಕುವುದು:** ಆಹಾರ ಪದಾರ್ಥದ ಚಿತ್ರಗಳನ್ನು ಹೊರಾಂಗಣ ಪ್ರದೇಶದಲ್ಲಿ ಬಚ್ಚಿಡಿ. ಪ್ರತಿಯೊಂದು ವಿದ್ಯಾರ್ಥಿಗಳ ಗುಂಪು ಸಹ ಪ್ರೋಟೀನ್, ಕಾರ್ಬೋಹೈಡ್ರೇಟ್, ಕೊಬ್ಬಿನ ಅಂಶ ಮತ್ತು ನಾರು ಪದಾರ್ಥಗಳನ್ನು ಹೊಂದಿರುವ ತಾವು ತಿನ್ನುವ ಮೂರು ವಿವಿಧ ಆಹಾರ ಪದಾರ್ಥಗಳ ಚಿತ್ರಗಳನ್ನು ಸಂಗ್ರಹಿಸುವುದು ಅಥವಾ ಆಹಾರ ಪದಾರ್ಥಗಳನ್ನು ಚಿತ್ರ ಬಿಡಿಸುವುದು.<br>ವಿದ್ಯಾರ್ಥಿಗಳು ಈ ಆಹಾರ ಪದಾರ್ಥಗಳನ್ನು ಬಳಸಿ ಸಮತೋಲಿತ ಆಹಾರದ ಚಿತ್ರವನ್ನು ರಚಿಸುವರೆ? | **ಸ್ಥಿತಿ ಬದಲಾವಣೆಯಾಗುವುದು:** ಮಳೆ ಬಂದಾಗ (ಅಥವಾ ನೀವು ಮಣ್ಣಿನ ಮೇಲೆ ನೀರನ್ನು ಸುರಿದಾಗ) ಹಗಲಿನಲ್ಲಿ ನೀರು ಏನಾಗುತ್ತದೆ ಎಂಬುದನ್ನು ವೀಕ್ಷಿಸಿ. ನೀರು ಎಲ್ಲಿ ಹೋಯಿತು?<br>ನೀರಿನಲ್ಲಿ ಸಕ್ಕರೆ ಅಥವಾ ಉಪ್ಪನ್ನು ಕರಗಿಸಿ. ಇದನ್ನು ಹಿಮ್ಮುಖವಾಗಿಸಲು (ಮರಳಿ ಬದಲಾಯಿಸಲು) ನಾವು ಏನು ಮಾಡಬೇಕು? | **ನೆರಳು:** ವಿದ್ಯಾರ್ಥಿಗಳು ಜೋಡಿಯಾಗಿ ಪರಸ್ಪರರ ನೆರಳಿನ ಸುತ್ತಲೂ ಗೆರೆಯನ್ನು ಎಳೆಯುವರು.<br>ಪ್ರತಿದಿನ ಶಾಲೆಯು ಪ್ರಾರಂಭವಾದಾಗ ಮತ್ತು ಮುಗಿಯುವಾಗ ನೆರಳು ಹೇಗೆ ವ್ಯತ್ಯಾಸವಾಗುತ್ತದೆ? ವ್ಯತ್ಯಾಸಗಳನ್ನು ವೀಕ್ಷಿಸಿ ಮತ್ತು ವಿವರಿಸಿ. |
| | | **ಬೆಳಕಿನ ತರಂಗಗಳು**: ಹೊರಗಿನ ವಿವಿಧ ಬಣ್ಣದ ವಸ್ತುಗಳನ್ನು ನೋಡಲು ಕೆಂಪು ಮತ್ತು ಹಸಿರು ಫಿಲ್ಟರ್ ಗಳನ್ನು ಬಳಸಿ.<br>ವಸ್ತುವಿನ ನೈಜ ಬಣ್ಣವನ್ನು ಮತ್ತು ಫಿಲ್ಟರ್ ನ ಮೂಲಕ ನೋಡಿದಾಗ ಕಾಣುವ ಬಣ್ಣವನ್ನು ದಾಖಲಿಸಿ. ನೀವು ಏನನ್ನು ಗಮನಿಸಿದಿರಿ? ಇದು ಏಕೆ ಹೀಗಾಯಿತು? |
| | | **ವೇಗದ ಕಾರುಗಳು:** ಯಾವ ಮೇಲ್ಮೈ ಇರುವ ಜಾಗವು, ಆಟದ ಕಾರುಗಳು ನಿಧಾನವಾಗಿ ಅಥವಾ ವೇಗವಾಗಿ ಚಲಿಸುವಂತೆ ಮಾಡುತ್ತವೆ? ಏಕೆ? |

## ಹೆಚ್ಚುವರಿ ಸಂಪನ್ಮೂಗ ಳು

- A module for teachers on using the outside environment: http://www.unesco.org/education/tlsf/mods/theme_d/mod26.html

## ಪರಾಮರ್ಶನ ಗ್ರಂಥಗಳು/ಗ್ರಂಥಸೂಚಿ

BodhaguruLearning [YouTube user] (2012) ‘Science – types of plants – English’ (online), YouTube, 1 June. Available from: http://www.youtube.com/watch?v=ODjAfDxThGU (accessed 18 December 2013).

JinguKid [YouTube user] (2013) ‘Plants’ (online), YouTube, 26 March. Available from: http://www.youtube.com/watch?v=j4AkT5WDSXg (accessed 18 December 2013).

National Council for Teacher Education (2009) *National Curriculum Framework for Teacher Education* [Online], New Delhi, NCTE. Available at http://www.ncte-india.org/publicnotice/NCFTE_2010.pdf (accessed 16 January 2014).

New Jersey Pinelands Commission (undated) ‘Lesson 1: tree, shrub, herb’ (online), On-Line Curriculum Project. Available from: http://www.state.nj.us/pinelands/infor/curric/pinecur/tsh.htm (accessed 18 December 2013).

Wikipedia, http://en.wikipedia.org/wiki/Main_Page (accessed 18 December 2013).

### Acknowledgements

This content is made available under a Creative Commons Attribution-ShareAlike licence (http://creativecommons.org/licenses/by-sa/3.0/), unless identified otherwise. The licence excludes the use of the TESS-India, OU and UKAID logos, which may only be used unadapted within the TESS-India project.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.